"That a sum not exceeding Rs. 9,66,000 be granted to the Government to defray the charges which will come in course of payment during the year ending 31st day of March 1954, in respect of 'Botanical and other Public Gardens'."

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ಈ 'ಡಿಮ್ಯಾಂಡಿಗೆ' ಸಂಬಂಧಪಟ್ಟ ಇಲಾಖೆಯ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೈಸುತ್ತೇನೆ.

ಸಾಮಾನ್ಯವಾಗಿ ಈ ಡಿಪಾರ್ಟ್‌ಮೆಂಟಿನವರು ಮಾಡುತ್ತಿರತಕ್ಕ ಕೆಲಸಕಾರ್ಯಗಳು ಅಷ್ಟು ಸುಲಭವಾಗಿ ಜನರಕಣ್ಣಿಗೆ ಬೀಳುವುದು ಕಷ್ಟ. ಆದರೆ ಈ ಡಿಪಾರ್ಟ್‌ಮೆಂಟ್ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದೆ, ಈಗ ಹಾಲಿ ಏನೇನು ಕಾರ್ಯ ಕ್ರಮಗಳನ್ನು ಕೈಕೊಂಡಿದೆ ಎಂಬುದರ ಬಗ್ಗೆ ಕೆಲವು ವಿವರಣೆಗಳನ್ನು ಕೊಡತಕ್ಕದ್ದು ಅಗತ್ಯವೆಂದು ಭಾವಿಸುತ್ತೇನೆ.

ಈ ಹಾರ್ಟಿಕಲ್‌ಚರಲ್ ಡಿಪಾರ್ಟ್‌ಮೆಂಟ್ ಎಂಬುದು ಮೊದಲು ನಮ್ಮ ಬೆಂಗಳೂರು ನಗರದಲ್ಲಿದ್ದು ಪ್ರಪಂಚಕ್ಕೇ ಹೆಸರುವಾಸಿಯಾಗಿರತಕ್ಕ "ಲಾಲ್‌ಬಾಗ್" ಎಂಬ ತೋಟದಲ್ಲಿ ಪ್ರಾರಂಭವಾಯಿತು. ಈಗ ಈ ಇಲಾಖೆಯವರು 200 ತೋಟಗಳ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಪ್ರಪಂಚಕ್ಕೇ ಹೆಸರಾದಂಥ 'ಬೃಂದಾವನ ಗಾರ್ಡನ್' ಎಂಬ ತೋಟ ಈ ಇಲಾಖೆಯ ಆಡಳಿತದಲ್ಲಿದೆ. ನಂದೀಹಿಲ್ಸ್ ಗಾರ್ಡನ್ ಮತ್ತು ಕೃಷ್ಣರಾಜೇಂದ್ರಹಿಲ್ಸ್ ಗಾರ್ಡನ್,-ಇದನ್ನು ಸಾಮಾನ್ಯವಾಗಿ "ಕೆಮ್ಮಣ್ಣುಗುಂಡಿ ಸ್ಕ್ವೇರ್" ಎಂದು ಕರೆಯುವ ವಾಡಿಕೆಯಿದೆ—ಈ ತೋಟಗಳೆಲ್ಲಾ ಈ ಇಲಾಖೆಯ ಆಡಳಿತಕ್ಕೊಳಪಟ್ಟಿರುತ್ತವೆ. ಈಗಾಗಲೇ ನಾನು ತಿಳಿಸಿದಂಥ ನಮ್ಮ "ಲಾಲ್‌ಬಾಗ್ ತೋಟ" ವೆಂಬುದು ಹೈದರಾಲಿಯ ಕಾಲದಲ್ಲೇ ಪ್ರಾರಂಭಿಸಿದ್ದೆಂದು ತಿಳಿದು ಬರುತ್ತದೆ. ತಾವು ಈಗ ಯಾರು ಬೇಕಾಗಿದ್ದರೂ ಹೋಗಿ ನೋಡಿಕೊಂಡು ಬರಬಹುದು, ಆ ಲಾಲ್‌ಬಾಗ್ ಎಂಬ ತೋಟದಲ್ಲಿ ಟಿಪ್ಪೂ ಹಾಕಿದ ಎರಡು ಮಾವಿನಗಿಡಗಳು ಇನ್ನೂ ಇರುತ್ತವೆ. ಅದನ್ನು ತಾವೆಲ್ಲರೂ ಹೋಗಿನೋಡಿ ಸಂತೋಷ ಪಡಬಹುದು.

ಆದರೆ ಈಗ ಈ ಇಲಾಖೆಯು ನಡೆಸುತ್ತಿರುವ ಮುಖ್ಯಾಡಳಿತದಲ್ಲಿ ಕೈಕೊಂಡಿರತಕ್ಕ ನಾನಾ ಮುಖವಾದ ಕಾರ್ಯಕ್ರಮಗಳೇನೆಂಬುದನ್ನು ನೋಡುವುದಾದರೆ, ಈ ಇಲಾಖೆಯವರು ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಉತ್ತಮ ದರ್ಜೆಯ ಹಣ್ಣಿನಗಿಡಗಳು, ಬೀಜಗಳು ಮತ್ತು ಒಳ್ಳೊಳ್ಳೆಯ ತರಕಾರಿ ಬೀಜಗಳು ಇತ್ಯಾದಿಗಳನ್ನು ತರಿಸಿ ಅದನ್ನು ದೇಶಾದ್ಯಂತವೂ ಹರಡುವಂತೆ ಪ್ರೊಪೊಗೇಟ್‌ಮಾಡತಕ್ಕ ಕಾರ್ಯಾಚರಣೆಯನ್ನು ಕೈಕೊಂಡಿದ್ದಾರೆ. ಈದಿವಸ ದೇಶದಲ್ಲಿ ಅಲ್ಲಲ್ಲೇ ನಾನಾಜಾತಿಗೆ ಸೇರಿದ ಇಂಗ್ಲೀಷ್ ಹಣ್ಣುಗಳು, ಇಂಗ್ಲೀಷ್‌ಜಾತಿಗೆ ಸೇರಿದ ತರಕಾರಿಗಿಡಗಳು, ಈ ಎಲ್ಲವೂ ಈಗ ದೇಶದಲ್ಲಿ ಹರಡಿರತಕ್ಕದ್ದು ಈ ಇಲಾಖೆಯ ಮುಖಾಂತರವೇ.

ಆದರೆ ಚಾಲ್ತೀ ಸಾಲಿನಲ್ಲಿ ಈ ಹಣ್ಣು ಹಂಪಲು ಮತ್ತು ತರಕಾರಿಗಳಕಡೆಗೆ ಅಷ್ಟು ಹೆಚ್ಚಿನ ಗಮನ ಕೊಡದೆ ಆಹಾರ ಉತ್ಪತ್ತಿಗೆ ಸಂಬಂಧಪಟ್ಟ ಬೆಳೆಗಳ ಕಡೆಗೆ ಹೆಚ್ಚಿಗೆ ಗಮನ ಕೊಡಲಾಗಿದೆ. ಈ ಸಂಬಂಧವಾಗಿ ನಮ್ಮ ದೇಶದಲ್ಲಿ ಉತ್ತಮ ತಳಿಯ ಆಲೂಗಡ್ಡೆಯನ್ನು ಬೆಳೆಸಲು ಪ್ರಾರಂಭಮಾಡಲಾಗಿದೆ. ಈಗ ಈ ಇಲಾಖೆಯ ಗಮನವೆಲ್ಲಾ ಅತ್ತಕಡೆಗೆ ಬಿದ್ದಿದೆ. ಈ ವರ್ಷ ಒಬ್ಬ ರೈತ ಈ ಇಲಾಖೆಯಮೂಲಕ ತಿಳಿವಳಿಕೆಗಳನ್ನು ಪಡೆದು ಈ ಇಲಾಖೆಯಿಂದ ಉತ್ತಮ ದರ್ಜೆ ಆಲೂಗಡ್ಡೆಯ ಬೀಜಗಳನ್ನು ಪಡೆದು ಬೆಳೆಯಲಾದ ಆಲೂಗಡ್ಡೆಯಲ್ಲಿ ಕೆಲವನ್ನು "All India potato Competition Exhibition" ಗೆ ಕಳುಹಿಸಿರುತ್ತಾನೆ. ಅಂದಮೇಲೆ ಎಷ್ಟರಮಟ್ಟಿಗೆ ಈ ಆಲೂಗಡ್ಡೆ ಬೆಳೆಗೆ ನಮ್ಮ ದೇಶದಲ್ಲಿ ಈ ಹಾರ್ಟಿಕಲ್‌ಚರಲ್ ಇಲಾಖಾ ಮುಖೇನ ಒಂದು ಹೆಚ್ಚಿನ ಗಮನ ಕೊಡಲಾಗುತ್ತಿದೆಯೆಂಬುದು ತಿಳಿದ ಬರುತ್ತದೆ.

ಹೀಗೆ ಈ ಆಹಾರಕ್ಕೆ ಸಂಬಂಧಪಟ್ಟ ಬೆಳೆಗಳ ಬಗ್ಗೆ ಆಸಕ್ತಿವಹಿಸಿರುವುದರ ಜೊತೆಗೆ, ಈ ಇಲಾಖೆ ಕೈಕೊಂಡಿರತಕ್ಕ ಇತರ ಮುಖ್ಯ ಕಾರ್ಯಾಚರಣೆಗಳೇನೆಂದರೆ—ಈವರ್ಷ ನಮ್ಮ ದೇಶದಲ್ಲಿ ಯಾರು ಯಾರು ಈ ಹಾರ್ಟಿಕಲ್‌ಚರಲ್ ವಿಚಾರಗಳ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿರುತ್ತಾರೋ ಅಂಥ ಜನಗಳಿಗೆ ತಿಳಿವಳಿಕೆ ಕೊಡತಕ್ಕ ಬಗ್ಗೆ ಬೆಳಗಿನ 9 ಘಂಟೆಯಿಂದ ಮಧ್ಯಾಹ್ನ 12 ಘಂಟೆಯವರೆಗೂ ಎಂದರೆ 3 ಘಂಟೆಗಳ ಕಾಲದತನಕ ಯಾರು ಯಾರು ವಾಲಂಟಿಯರ್ಸ್ ಆಗಿ ಬರುತ್ತಾರೋ ಅಂಥವರುಗಳಿಗೆ ಈ ಆಹಾರ ಬಾಬಿನ ಮತ್ತು ತರಕಾರಿ, ಹಣ್ಣುಹಂಪಲು ಇತ್ಯಾದಿ ಎಲ್ಲಾ ಬೆಳೆಗಳ ಬಗ್ಗೆ ಸಾಕಷ್ಟು ತಿಳಿವಳಿಕೆಯನ್ನು ಥಿಯರಿ ಮತ್ತು ಪ್ರಾಕ್ಟೀಸ್ ಎರಡರಲ್ಲೂ ಕೊಡಲಾಗುತ್ತಿದೆ. ಹೀಗೆ ನಡೆಸಲಾಗುತ್ತಿರುವ ತರಗತಿಗೆ ಅನೇಕ ಜನ ವಿದ್ಯಾರ್ಥಿಗಳೇ ಅಲ್ಲದೆ ಬಹುಮಂದಿ ರಿಟೈರ್ಡ್ ಅಧಿಕಾರಿಗಳೂ ಬಂದು ಈ ಸಹಾಯವನ್ನು ಪಡೆಯುತ್ತಿದ್ದಾರೆ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಎಷ್ಟು ಜನರು ಬಂದು ಹಾಗೆ ಶಿಕ್ಷಣಪಡೆಯುತ್ತಿದ್ದಾರೆ ?

ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಸಸಿಗಳಿಗೆ ನೀರನ್ನು ಹಾಕುವುದಕ್ಕೂ ಟ್ರೈನಿಂಗ್ ಬೇಕೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು. ಕೈಕೆಸರಾದರೇ ಬಾಯಿಮೊಸರಾಗುವುದು.

ಇನ್ನೊಂದು ಮುಖ್ಯಾಂಶವೇನೆಂದರೆ—ಈ ಇಲಾಖೆಯ ವ್ಯಾಪ್ತಿಯನ್ನು ಕೇವಲ ಬೆಂಗಳೂರು–ಮೈಸೂರುಗಳಿಗೇ ನಿಲ್ಲಿಸದೆ ಇದರ ವ್ಯಾಪ್ತಿಯನ್ನು ಇತರ ಎಲ್ಲಾ ಜಿಲ್ಲೆಗಳಿಗೂ, ಅನಂತರ ಪ್ರತಿಯೊಂದು ತಾಲ್ಲೂಕುಗಳಿಗೂ ಮತ್ತು ಗ್ರಾಮಾಂತರ ಪ್ರದೇಶಗಳಿಗೂ ಹಬ್ಬಿಸಿ, ಈ ಇಲಾಖೆಯ ಪ್ರಯೋಜನವನ್ನು ಸರ್ವರಿಗೂ ತೋರಿಸಿಕೊಡಬೇಕೆಂಬ ಆಕಾಂಕ್ಷೆಯಿಂದ ಇದನ್ನು ಇನ್ನೂ ಹೆಚ್ಚು ವಿಸ್ತಾರಗೊಳಿಸಬೇಕೆಂದಿದ್ದೇವೆ.

ಯಾರು ಯಾರು ಎಲ್ಲೆಲ್ಲಿ ಈ ಹೊಸ ಹೊಸ ಜಾತಿಯ ಹಣ್ಣಿನ ಮತ್ತು ತರಕಾರಿಯ ಗಿಡಗಳನ್ನು ಬೆಳೆಸಬೇಕೆಂದು ಆಶೆಪಡುತ್ತಾರೋ ಅಂಥವರಿಗೆ ಉಚಿತವಾಗಿ ತಿಳಿವಳಿಕೆ ಕೊಡಲು ನಮ್ಮ ಇಲಾಖೆಯ ಅಧಿಕಾರಿಗಳನ್ನೂ ಮತ್ತೂ ವ್ಯವಸಾಯದ ಇಲಾಖಾ ಫೀಲ್ಡ್ ಮ್ಯಾನ್‌ಗಳನ್ನು ಆ ಸ್ಥಳಗಳಿಗೆ ಕಳುಹಿಸಿ ಕೊಡಬೇಕೆಂದು ಆಜ್ಞೆ ಮಾಡಲಾಗಿದೆ. ಅವರು ಆ ಸ್ಥಳಗಳಿಗೆ ಹೋಗಿ ಜನರಿಗೆ ಉಚಿತವಾಗಿ ಟ್ರೈನಿಂಗ್ ಕೊಡುತ್ತಾರೆ. ಪ್ರಾಯೋಗಿಕ ದೃಷ್ಟಿಯಿಂದ ಈ ರೀತಿಯಾಗಿ ಸಹಾಯ ಬೇಕೆಂದು ಕೋರಲಾಗಿದ್ದ ತುಮಕೂರು ತಾಲ್ಲೂಕು ಶ್ರೀ ಸಿದ್ಧಗಂಗಾ ಕ್ಷೇತ್ರಕ್ಕೆ ಅಲ್ಲಿರತಕ್ಕ 600 ಜನ ವಿದ್ಯಾರ್ಥಿಗಳಿಗೆ ತಿಳಿವಳಿಕೆ ಕೊಡುವುದಕ್ಕೂ ಮತ್ತು ಅವರಿಗೆ ಒಳ್ಳೊಳ್ಳೆಯ ಹಣ್ಣಿನ ಗಿಡಗಳನ್ನು ಮತ್ತು ಇತರ ಬೀಜಗಳನ್ನು ಸರಬರಾಯಿಮಾಡಲು ಒಬ್ಬ ಅಧಿಕಾರಿಗಳನ್ನು ಈ ಇಲಾಖೆಯಿಂದ ಅಲ್ಲಿಗೆ ಕಳುಹಿಸಿ ಕೊಟ್ಟಿದ್ದೇವೆ. ಹೀಗೆ ಇನ್ನೂ ಯಾವ ಯಾವ ಸ್ಕೂಲ್ ಸಂಸ್ಥೆಯವರು ಮುಂದೆ ಬರುತ್ತಾರೋ ಅಂಥವರಿಗೂ ಈ ರೀತಿಯ ಸಹಾಯಗಳನ್ನು ನೀಡಬೇಕೆಂದು ಇಲಾಖಾ ಅಧಿಕಾರಿಗಳಿಗೆ ತಿಳಿಸಲಾಗಿದೆ.

ಇನ್ನೂ ಖರ್ಚು ವೆಚ್ಚಗಳ ಬಗ್ಗೆ ಈ ಇಲಾಖೆಗೆ ಈ ಸಾಲಿನಲ್ಲಿ 9 ಲಕ್ಷ 17 ಸಾವಿರದ 800 ರೂಪಾಯಿ

(ಶ್ರೀ ಎಚ್. ಸಿದ್ದವೀರಪ್ಪ.)

ಗಳನ್ನು ಬಡ್ಜೆಟ್‌ನಲ್ಲಿ ಒದಗಿಸಲಾಗಿದೆ. ಈಸಲ ಒದಗಿಸಿರುವ ಮೊಬಲಗು ಸ್ವಲ್ಪ ಜಾಸ್ತಿಯಾಗಿದೆ. ಅದಕ್ಕೆ ಕಾರಣವೇನೆಂದರೆ, ಕೆಲವು ಹಿಲ್ ಸ್ಟೇಷನ್‌ಗಳನ್ನು ಅಭಿವೃದ್ಧಿಪಡಿಸಬೇಕೆಂದು, ಈ ಇಲಾಖೆಯ ನೌಕರರು ಕೆಲವರಿಗೆ—ಈ ಇಲಾಖಾ ನೌಕರರೆಲ್ಲಾ ಸಾಮಾನ್ಯವಾಗಿ ಕೂಲೀ ಜನರೇ ಆಗಿರುತ್ತಾರೆ. ಇವರ ಕೆಲಸ ಬಹಳ ಕಷ್ಟತರವಾದ್ದರಿಂದ ಇವರಿಗೆ ಡಿ. ಎ. ಸ್ವಲ್ಪ ಜಾಸ್ತಿಯಾಗಿ ಕೊಟ್ಟು ತನ್ಮೂಲಕ ಆ ಹಿಲ್‌ಸ್ಟೇಷನ್‌ಗಳನ್ನು ವಿಸ್ತರಣ ಮಾಡಬೇಕೆಂಬ ಉದ್ದೇಶಿಸಲಾಗಿದೆ.

ಮೈಸೂರಿನಲ್ಲಿರತಕ್ಕ ‘ಜೂ’ ಗಾರ್ಡನ್ ಆಡಳಿತ ಸಹ ಈ ಇಲಾಖೆಗೇ ಸೇರಿರುತ್ತದೆ. ಅದಕ್ಕೆ ಒದಗಿಸಬೇಕಾಗಿರತಕ್ಕ ಆಹಾರ ಸಾಮಗ್ರಿಗಳ ಬೆಲೆ ಒಂದಕ್ಕೆ ನಾಲ್ಕರಷ್ಟು ಹೆಚ್ಚಾಗಿದೆ. ಬೀಫ್ ಒಂದಕ್ಕೇ ಸುಮಾರು ವರ್ಷಕ್ಕೆ ಒಂದು ಲಕ್ಷ ಖರ್ಚಾಗುತ್ತದೆ. ಆದರೆ ಎಲ್ಲ ದೃಷ್ಟಿಯಲ್ಲಿ ಎಷ್ಟೆಷ್ಟು ಖರ್ಚನ್ನು ಕಮ್ಮಿ ಮಾಡಬಹುದೋ ಅಷ್ಟನ್ನು ಕಮ್ಮಿ ಮಾಡಲಾಗಿದೆ. ಈ ವರ್ಷ ಕೂಡ ಹಾಗೆ ಕಮ್ಮಿ ಮಾಡಲು ಎಲ್ಲ ಪ್ರಯತ್ನಗಳನ್ನು ಮಾಡಲಾಗಿದೆ. ಈ ಇಲಾಖೆಯಲ್ಲಿ ಅಧಿಕಾರಿಗಳು ಬಹಳ ತೃಪ್ತಿಕರವಾಗಿ ಕೆಲಸ ಮಾಡುತ್ತಿದ್ದಾರೆಂಬುದು ನನಗೆ ಮನಃಪೂರ್ವಕವಾಗಿ ಕಂಡುಬಂದಿದೆ. ತಾವೆಲ್ಲರೂ ಈ ಡಿಮ್ಯಾಂಡಿಗೆ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Sri S. SRINIVASA IYENGAR.—I am not moving the cut motion.

Making Krishnarajendra Hill Station more attractive.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಸ್ವಾಮಿ, ನನ್ನ ಖೋತಾ ಸೂಚನೆಯು ಈ ರೀತಿಯಾಗಿದೆ. ಅದನ್ನು ಮಂಡಿಸುತ್ತೇನೆ.

"The demand under the head '40 (h) Botanical and other Public Gardens' for Rs. 9,66,000 be reduced by Rs. 100 (to stress the need for making Krishnarajendra Hill Station more attractive by providing more amenities for the public that stay there during the season)."

ಸ್ವಾಮಿ, ಈ ಕೃಷ್ಣರಾಜೇಂದ್ರ ಹಿಲ್ಸ್ ಸ್ಟೇಷನನ್ನು, ಈಗತಾನೆ ಮಾನ್ಯ ಮಂತ್ರಿಗಳು ತಿಳಿಸಿದಂತೆ, ಕೆಮ್ಮಣ್ಣುಗುಂಡಿ ಸ್ಟೇಷನ್ ಎಂದು ಜನರು ಹೇಳುತ್ತಾರೆ. ಅದನ್ನು ನಾನು ಬಹಳ ಮುಖ್ಯವಾದುದೆಂದು ಹೇಳುತ್ತೇನೆ. ಆದರೆ ಜನರಿಗೆ ಅದಕ್ಕೆ ಪ್ರಾಮುಖ್ಯತೆ ವಿಚಾರ ಅಷ್ಟಾಗಿ ಹೆಚ್ಚಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಮೊನ್ನೆ ತಾನೆ ಹೈದರಾಬಾದಿನಿಂದ ಒಬ್ಬ ಪ್ರವಾಸಿಯು ಇಲ್ಲಿಗೆ ಬಂದಿದ್ದರು. ಆಗ ಅವರು ಈ ಕೆಮ್ಮಣ್ಣುಗುಂಡಿ ಸ್ಟೇಷನ್ ವಿಚಾರವಾಗಿ ಏನು ಹೇಳಿದ್ದಾರೆಂದರೆ—‘‘ಇದು ಬಹಳ ಒಳ್ಳೆಯ ಪ್ರದೇಶ, ಇದರ ಪ್ರಯೋಜನ ಹೊರಗಿನಿಂದ ಬರತಕ್ಕ ನಮ್ಮಂಥಾ ಜನಗಳಿಗೆ ದೊರೆಯುತ್ತಿದೆಯೇ ಹೊರತು, ಮೈಸೂರಿನವರಿಗೆ ಇದರ ಪ್ರಯೋಜನ ಅಷ್ಟಾಗಿ ಗೊತ್ತಿಲ್ಲ’’ವೆಂದು ಹೇಳಿದ್ದಾರೆ. ಕಳೆದ ವರ್ಷ ಒಂದು ತಿಂಗಳು ನಾನು ಅಲ್ಲಿ ಇದ್ದೆ. ತಾವು ಅಲ್ಲಿ ಪ್ರವಾಸಿಗಳಿಗೆ ಕಲ್ಪಿಸಿರತಕ್ಕ ಸೌಕರ್ಯಗಳನ್ನು ಇನ್ನು ಸ್ವಲ್ಪ ಹೆಚ್ಚಿಗೆ ಇಡತಕ್ಕದ್ದು ಸೂಕ್ತವೆಂದೂ, ಆದರಿಂದ ಅಲ್ಲಿಗೆ ಹೆಚ್ಚು ಹೆಚ್ಚು ಪ್ರವಾಸಿಗಳು ಬರಲು ಅನುಕೂಲವಾಗುತ್ತದೆಂದೂ ಭಾವಿಸುತ್ತೇನೆ. ಈಗ ಅಲ್ಲಿ ಕೇಟರಿಂಗ್‌ನ ಅನುಕೂಲತೆಯಿಲ್ಲ. ಸರಿಯಾದ ಆಹಾರ ದೊರೆಯುವಂತಿಲ್ಲ. ಅಲ್ಲಿರುವ Catering ಏರ್ಪಾಡು ಅಷ್ಟು ತೃಪ್ತಿಕರವಾಗಿಲ್ಲ. ಒಂದು ವೇಳೆ ಅದು ಹಿಲ್‌ಸ್ಟೇಷನ್ ಆಗಿರುವುದರಿಂದ ಅಲ್ಲಿ ಸರಿಯಾದ ಏರ್ಪಾಡು ಮಾಡಬೇಕಾದರೆ ಹೆಚ್ಚು ಖರ್ಚಾಗುತ್ತದೆಂದು ಸರ್ಕಾರದವರ ಅಭಿಪ್ರಾಯವಾಗಿದ್ದರೆ ಅಥವಾ ಎಷ್ಟು ಖರ್ಚು ಮಾಡುತ್ತೇವೆಯೋ ಅಷ್ಟಕ್ಕೆ ಸರಿಯಾದ Return ಬರುವುದಿಲ್ಲವೆಂದು ಭಾವಿಸಿದ್ದರೆ, ಸರ್ಕಾರದವರು ಆ ಪ್ರದೇಶವನ್ನೇ ಹೆಚ್ಚು ಜನಾಕರ್ಷಣೀಯವನ್ನಾಗಿ ಮಾಡಿ ಹೆಚ್ಚು ಹೆಚ್ಚು Touristsಗಳು ಬರುವಂತೆ ಮಾಡಿದರೆ ಆಗ ಕ್ರಮೇಣ ಅದೇ ಒಂದು ವಿಧದಲ್ಲಿ ಲಾಭದಾಯಕವಾಗುತ್ತದೆಂಬುದರಲ್ಲಿ ಸಂದೇಹವಿಲ್ಲ ಈ ದೃಷ್ಟಿಯಿಂದ ಸದ್ಯಕ್ಕೆ ಆದಕ್ಕೆ ಹೆಚ್ಚು ಖರ್ಚಾದರೂ ಚಿಂತೆಯಿಲ್ಲ, ಸರಿಯಾದ ಏರ್ಪಾಡು ಮಾಡಬೇಕಾದದ್ದು ಒಂದು.

ಎರಡನೆಯದಾಗಿ, ಅಲ್ಲಿಯೇ ಚಿಕ್ಕ ಚಿಕ್ಕ Cottagesಗಳಿರುತ್ತವೆ. ಅವುಗಳಲ್ಲಿ ಊಟ ತಿಂಡಿ ಮಾಡಿಕೊಳ್ಳುವವರಿಗೆ ಕೆಲವು ಅನುಕೂಲತೆಗಳನ್ನು ಮಾಡಿಕೊಡುವುದು ಅತ್ಯಾವಶ್ಯಕ. ಮೊದಲನೆಯದಾಗಿ, ಅಲ್ಲಿಂದ ಬೇರೆ ಕಡೆಗೆ ಓಡಾಡುವುದಕ್ಕೆ ಪ್ರಯಾಣ ಸೌಕರ್ಯಗಳು ಅಂದರೆ ಈಕಡೆ ಶಿವಮೊಗ್ಗ, ಭದ್ರಾವತಿ, ತರೀಕೆರೆ ಕಡೆಗೂ, ಅತ್ತಕಡೆ ಚಿಕ್ಕಮಗಳೂರು ಕಡೆಗೂ ಆ Season ನಲ್ಲಿ ಸರಿಯಾದ ಬಸ್ ವ್ಯವಸ್ಥೆ ಮಾಡಿದರೆ ಚೆನ್ನಾಗಿರುತ್ತದೆ. ಅಲ್ಲಿಗೆ ಬೇಕಾದ ವಸ್ತುಗಳನ್ನು ಚಿಕ್ಕಮಗಳೂರು ಕಡೆಯಿಂದಾಗಲಿ ಅಥವಾ ತರೀಕೆರೆ ಭದ್ರಾವತಿಯಿಂದಾಗಲಿ ತರಿಸುವುದಕ್ಕೆ ಅನುಕೂಲಮಾಡಿದರೆ ಒಳ್ಳೆಯದು. ನಾನು ಹೋದ ವರ್ಷ Season ನಲ್ಲಿ ಅಲ್ಲಿ ಒಂದು ತಿಂಗಳಿದ್ದಾಗ ಈ ರೀತಿ ಸಂಚಾರ ಸೌಕರ್ಯವಿಲ್ಲದಿರುವ ವಿಷಯದಲ್ಲಿ ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಪತ್ರ ಬರೆದು ಅನುಕೂಲ ಮಾಡಿಕೊಡಿ ಎಂದು ಹೇಳಿದೆ. ಆದರೆ ಅವರು ಸರಿಯಾದ ಏರ್ಪಾಡು ಮಾಡಲಿಲ್ಲ. ಆಮೇಲೆ ನಾನು ಮಾನ್ಯ ಮಂತ್ರಿಗಳಿಗೂ ಸಹ ಬರೆದು ತಿಳಿಸಿ ಸರಿಯಾದ ಅನುಕೂಲಗಳನ್ನು ಮಾಡಬೇಕೆಂದು ಕೇಳಿದೆ. ಈ ದಾರಿ ಗುಡ್ಡ ಕಾಡುಗಳಲ್ಲಿ ಹೋಗುವುದರಿಂದ, ಅಲ್ಲಿ ಬಸ್ಸುಗಳನ್ನು ಓಡಿಸುವುದಕ್ಕೆ ಯಾರೂ ಬರುವುದಿಲ್ಲ, ಅದು ಹೆಚ್ಚು ಲಾಭದಾಯಕವಾಗಿರುವುದಿಲ್ಲವೆಂದು ಹೇಳಬಹುದು. ಅಂಥವರಿಗೆ ಬೇರೆ ಯಾವುದಾದರೂ ಲಾಭದಾಯಕವಾದ ಲೈನ್ ಕೊಟ್ಟು ಅದರ ಜೊತೆಗೆ ಇದನ್ನು ಕೊಟ್ಟರೆ ಅವರು ಬಹುಶಃ ಇದರಲ್ಲಾಗುವ ನಷ್ಟವನ್ನು ಸರಿತೂಗಿಸಿಕೊಳ್ಳಬಹುದೆಂದು ಹೇಳಬಹುದು. ಕ್ರಮೇಣ ಹೆಚ್ಚು ಹೆಚ್ಚು ಜನರು ಅಲ್ಲಿಗೆ ಹೋಗುವುದಕ್ಕೆ ಶುರುವಾದರೆ, ಅನಂತರ ಯಾವ ರೀತಿಯ Protection ನ್ನೂ ಕೊಡಬೇಕಾಗಿರುವುದಿಲ್ಲ. ಆಗ್ಗೆ ಬಹಳ ಜನರು ತಾವೇ ಮುಂದೆ ಬಂದು ಪರ್ಮಿಟ್ ಕೊಡಿ ಎಂದು ಕೇಳುತ್ತಾರೆ.

ಇದಾದಮೇಲೆ, ಇನ್ನೊಂದು ಮುಖ್ಯವಾದ ವಿಷಯವೆಂದರೆ, ಅಲ್ಲಿ ವಾಸಮಾಡುವವರಿಗೆ ತರಕಾರಿ, ಹಾಲು ಮುಂತಾದುವು ಸಿಕ್ಕುವಂತೆ ಮಾಡಬೇಕು. ಅಲ್ಲಿ ಹತ್ತಿರದಲ್ಲಿ ತರಕಾರಿಯಾಗಲಿ ಹಾಲಾಗಲೀ ಸಿಕ್ಕುವುದೇ ಕಷ್ಟ. ಇದಕ್ಕೊಂದು ಏರ್ಪಾಡು ತಾವು

ಮಾಡಬಹುದು. ಅಲ್ಲಿ ಕೆಲಸಮಾಡುವ ಅರಣ್ಯ ಶಾಖಾ ನೌಕರರುಗಳಿಗೆ ಬಡ್ಡಿಯಿಲ್ಲದೆ ಸಾಲಕೊಟ್ಟು ಒಳ್ಳೆಯ ತಳಿಯ ಹಸುಗಳನ್ನು ಅಲ್ಲಿ ಸಾಕುವುದಕ್ಕೆ ಏರ್ಪಾಡು ಮಾಡಿದರೆ ಹಾಲು ಮೊಸರು ಸಲೀಸಾಗಿ ಸಿಕ್ಕುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ಒಂದು ಸೂಚನೆಯನ್ನು ನಾನು ಸರ್ಕಾರದವರಿಗೆ ಕೊಡಲಿಚ್ಛಿಸುತ್ತೇನೆ.

ಹಾಗೆಯೇ Gardens ಇಲಾಖೆಯವರು ಸರಿಯಾದ ಸಿಬ್ಬಂದಿಯನ್ನಿಟ್ಟುಕೊಂಡು ಬರೀ ಕೆಲವು ಹೂವಿನ ಗಿಡಗಳನ್ನು ಇಟ್ಟುಕೊಂಡಿರುವುದರ ಜೊತೆಗೆ ಒಂದು Vegetable farm ನ್ನು ಇಡುವುದು ಒಳ್ಳೆಯದು.

ಈ ರೀತಿಯಾಗಿ ಅಲ್ಲಿರುವ ಕೆಲವು ತೊಂದರೆಗಳನ್ನು ನಿವಾರಿಸುವ ಬಗ್ಗೆಯೂ, ಅದು ಹೆಚ್ಚು ಜನಾನುರಾಗವನ್ನುಗಳಿಸಿ ಪ್ರೇಕ್ಷಕರು ಇನ್ನೂ ಇಮ್ಮಡಿಯಾಗಿ, ಮುಮ್ಮಡಿಯಾಗಿ ಬಂದು, ಸರ್ಕಾರದವರಿಗೆ ಇದರಿಂದ ಹೆಚ್ಚುಹೆಚ್ಚು ಹಣವನ್ನು ಸಂಪಾದನೆಮಾಡಲಿಕ್ಕೆ ಅವಕಾಶವಾಗಲೆಂದು ಈ ಖೋತಾ ಸೂಚನೆಯನ್ನು ಸಭೆಯ ಮುಂದಿಡುತ್ತೇನೆ

Mr. SPEAKER.—Cut motion moved :

"That the demand be reduced by Rs. 100."

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಅಧ್ಯಕ್ಷರೇ, ಈ ವಿಚಾರದಲ್ಲಿ ನಾನೂ ಎರಡು ಮಾತುಗಳನ್ನು ಹೇಳಲಿಷ್ಟಪಡುತ್ತೇನೆ. ಶ್ರೀಮಾನ್ ಸಿದ್ದಪ್ಪನವರು ಹೇಳಿದಹಾಗೆ ಈ ಕೃಷ್ಣರಾಜ ಹಿಲ್‌ಸ್ಟೇಷನ್ ಅಥವಾ ಕೆಮ್ಮಣ್ಣಗುಂಡಿ ಹಿಲ್‌ಸ್ಟೇಷನ್ ನ್ಯಾಯವಾಗಿ ಎಷ್ಟರಮಟ್ಟಿಗೆ ಜನಾಕರ್ಷಣೀಯ ಆಗಬೇಕೋ ಅಷ್ಟರಮಟ್ಟಿಗೆ ಆಗಿಲ್ಲವೆಂದರೆ ತಪ್ಪಾಗಲಾರದು. ಏಕೆಂದರೆ ಹೆಚ್ಚು ಜನರಿಗೆ ಈ ಸ್ಥಳದ ವಿಚಾರ ಪ್ರಚಾರವಾಗಿಲ್ಲ. ಬೇರೆ ಕಡೆಗಳಲ್ಲಿರುವ ಹಿಲ್‌ಸ್ಟೇಷನ್‌ಗಳಿಗೆ ಹೋಗುವ ಜನ ಇಲ್ಲಿಬರುತ್ತಿಲ್ಲ. ಇದಕ್ಕೆ ಶ್ರೀಮಾನ್ ಸಿದ್ದಪ್ಪನವರು ಹೇಳಿದ ಹಾಗೆ, ಕೆಲವು ಸೌಕರ್ಯಗಳನ್ನು ಒದಗಿಸಿದರೆ ಹೆಚ್ಚು ಜನರು ಬರಲಿಕ್ಕೂ ಮತ್ತು ಇರಲಿಕ್ಕೂ ಅನುಕೂಲವಾಗುತ್ತದೆ. ಈಚೀಚೆಗೆ ಅಲ್ಲಿರತಕ್ಕ ತೋಟವೂ ಬಹಳ ಮಟ್ಟಿಗೆ ಕೆಟ್ಟುಹೋಗಿದೆ. ಈಗೇನೋ ಸ್ವಲ್ಪಮಟ್ಟಿಗೆ ಉತ್ತಮಪಡಿಸಲು ಏರ್ಪಾಡು ಮಾಡಿದೆಯೆಂದು ತಿಳಿದುಬಂದಿದೆ. ಅಂತೂ ಹೆಚ್ಚು ಶ್ರಮಪಟ್ಟು ಹಿಂದೆ ಶ್ರೀ ಕೃಷ್ಣರಾಜ ಒಡೆಯರಿದ್ದಾಗ ಅದಕ್ಕೆ ಎಷ್ಟು ನಿಗಾಕೊಡುತ್ತಿದ್ದರೋ ಅಷ್ಟು ಕೊಟ್ಟರೆ ಅದು ಉತ್ತಮಸ್ಥಿತಿಗೆ ಬರುವುದಕ್ಕೆ ಅವಕಾಶವಾಗುತ್ತದೆ.

ಇದೂ ಅಲ್ಲದೆ, ಅಲ್ಲಿಗೊಂದು ಬಸ್ ಸರ್ವಿಸ್‌ಇದೆ. ಬಸ್ಸು ಭದ್ರಾವತಿಯಿಂದ ಬೆಳಗ್ಗೆ ಹೊರಟು ಕೆಮ್ಮಣ್ಣುಗುಂಡಿಯ ಮಾರ್ಗವಾಗಿ ಚಿಕ್ಕಮಗಳೂರಿಗೆ ಹೋಗುತ್ತದೆ. ಅಲ್ಲಿಂದ ಮಾರನೆಯದಿವಸ ಹೊರಟು ಭದ್ರಾವತಿಗೆ ಬರುತ್ತದೆ ಅಷ್ಟೆ. ಅದೂ, ಕೆಲವುವೇಳೆ ಹೋದರೆ ಹೋಯಿತು ಇಲ್ಲದಿದ್ದರೆಇಲ್ಲ, ಹೀಗಿದೆ. ಇದನ್ನು ಸರಿಪಡಿಸಬೇಕಾದದ್ದೂ ಮುಖ್ಯ.

ಹಾಲು ಮೊಸರಿನ ವಿಚಾರದಲ್ಲಿ, ಈಗ ಹಾಲು ಅಲ್ಲಿಗೆ ತರೀಕೆರೆ ಮತ್ತು ಲಿಂಗದ ಹಳ್ಳಿಯಿಂದಲೇ ಮುಖ್ಯವಾಗಿ ಸರಬರಾಯಿಯಾಗುತ್ತದೆ. ಆದ್ದರಿಂದ ಚಿಕ್ಕಮಗಳೂರು–ತರೀಕೆರೆಯಿಂದ ಇಲ್ಲಿಗೊಂದು ಷಟಲ್ ಬಸ್ ಸರ್ವಿಸ್ ಇಟ್ಟರೆ ಒಳ್ಳೆಯದು. ಒಂದಾನೊಂದು ಕಾಲದಲ್ಲಿ ತರೀಕೆರೆಯಲ್ಲಿ ಒಂದು ಹೋಟಲನ್ನು ಪ್ರಾರಂಭಮಾಡುವುದಕ್ಕೂ ಸರ್ಕಾರದವರು ಗ್ರಾಂಟುಕೊಡುತ್ತಿದ್ದರು. ಅದರಂತೆ ಈ ಹಿಲ್‌ಸ್ಟೇಷನ್ನಿಗೆ ಹೆಚ್ಚು ಜನರು ಹೋಗಿ ಬರುವುದಕ್ಕೆ ಅನುಕೂಲವಾಗುವಂತೆ ಒಂದು ಷಟಲ್ ಬಸ್ ಸರ್ವಿಸ್ಸನ್ನು ಸಬ್ಸಿಡಿಕೊಟ್ಟಾಗಲೀ ಅಥವಾ ಶ್ರೀಮಾನ್ ಸಿದ್ದಪ್ಪನವರು ಹೇಳಿದ ಹಾಗೆ ಬೇರೆ ಯಾವ ರೀತಿಯಲ್ಲಾದರೂ ಉತ್ತೇಜನ ಅಥವಾ ಸೌಲಭ್ಯ ಕೊಟ್ಟಾಗಲಿಮಾಡಿದರೆ ಹೆಚ್ಚು ಹೆಚ್ಚಾಗಿ ಪ್ರೇಕ್ಷಕರು ಇಲ್ಲಿಗೆಬರಲು ಅನುಕೂಲವಾಗುತ್ತದೆ.

ಆ ಮೇಲೆ, ಇನ್ನೊಂದು ಸಣ್ಣ ಅವಶ್ಯಕತೆಯೆಂದರೆ, ಅಲ್ಲಿಗೊಂದು ಪುಟ್ಟ ಲೈಬ್ರರಿಯನ್ನು ಏರ್ಪಾಡುಮಾಡುವುದು. ಅನೇಕ ಜನ ಅಲ್ಲಿಗೆಬರುವವರು ಓದಿಕೊಂಡು ಸುಲಭವಾಗಿ ಕಾಲಕಳೆಯುವುದಕ್ಕೆ ಅನುಕೂಲವಾಗುತ್ತದೆಂದು ಕಂಡುಬರುತ್ತದೆ. ಇಷ್ಟೇ ಅಲ್ಲದೆ ಅಲ್ಲಿ ಸಣ್ಣ ಸಣ್ಣ ಕುಟೀರಗಳ ಸಂಖ್ಯೆಯನ್ನು ಹೆಚ್ಚುಮಾಡಿ ಅಲ್ಲಿ ಸ್ವಂತವಾಗಿ ಅಡಿಗೆಮಾಡಿಕೊಳ್ಳುವುದಕ್ಕೆ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರೆ ಒಳೆಯದು. ಆದ್ದರಿಂದ ಈ ಖೋತಾ ನಿರ್ಣಯವನ್ನು ಸಮರ್ಥನೆಮಾಡಿ ಸರ್ಕಾರದವರು ಈ ಬಗ್ಗೆ ಹೆಚ್ಚು ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕ ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ, ಈ ಹಿಂದೆ ಮಾತನಾಡಿದ ಈರ್ವರು ಮಾನ್ಯ ಸದಸ್ಯರೂ ಅನೇಕ ಉಪಯುಕ್ತವಾದ ಸಲಹೆಗಳನ್ನು ನೀಡಿದ್ದಾರೆ. ಈ ಕೃಷ್ಣರಾಜೇಂದ್ರ ಹಿಲ್‌ಸ್ಟೇಷನ್ನನ್ನು All India Tourists Traffic ನಲ್ಲಿ ಸೇರಿಸಬೇಕೆಂದೂ ಸಹ ಮೊನ್ನೆ ಜನವರಿ ತಿಂಗಳಿನಲ್ಲಿ ನಡೆದ ಕಾನ್‌ಫರೆನ್ಸ್‌ನಲ್ಲಿ ಕೂಡ ಸೂಚಿಸಿದ್ದೇವೆ. All India Tourists Stations ನೊಳಗೆ ಇದನ್ನೂ ಸೇರಿಸಿಕೊಂಡು ಆದೇ ತರದವಿಕ್ಕ ಸ್ಟೇಷನ್‌ಗಳಂತೆ ಇಲ್ಲಿಗೂ ಕೆಲವು ಸೌಕರ್ಯಗಳನ್ನು ಕೂಡ ಕೊಡಬೇಕೆಂದು ಒತ್ತಾಯ ಪಡಿಸುತ್ತಿದ್ದೇವೆ.

ಕೃಷ್ಣರಾಜೇಂದ್ರ ಹಿಲ್‌ಸ್ಟೇಷನ್‌ನಲ್ಲಿರುವ ಒಂದು ಹೆಚ್ಚಿನ ಅನುಕೂಲತೆಯೇನೆಂದರೆ, ನೀರಿನ ವಿಚಾರದಲ್ಲಿ ಇಲ್ಲಿ ಏನೂ ತೊಂದರೆಯಿಲ್ಲ ಯಥೇಚ್ಛವಾಗಿ ನೀರಿದೆ. ನಂದೀ ಬೆಟ್ಟದಲ್ಲಾದರೋ ಇತ್ತೀಚೆಗೆ ನೀರಿಗೆ ಸ್ವಲ್ಪ ಕಷ್ಟ ಕಂಡುಬಂದಿದೆ ; ಆ ತೊಂದರೆಯು ಇಲ್ಲಿಲ್ಲ.

ಈ ದೃಷ್ಟಿಯಿಂದ ಇಲ್ಲಿಗೆ ಅನೇಕ improvements ಗಳನ್ನು ಮಾಡುವುದು ಅವಶ್ಯಕ. ಈಗಾಗಲೇ ಅಲ್ಲಿನ ಬಂಗಲೆಗಳಿಗೆ ರಿಪೇರಿ ವಗೈರೆ ಕೆಲಸಗಳನ್ನು ಹೋದ ವರ್ಷದ ಬಡ್ಜೆಟ್ಟಿನಲ್ಲಿ ಸೇರಿಸಿ ನಮ್ಮ ಪಬ್ಲಿಕ್ ವರ್ಕ್ಸ್ ಇಲಾಖೆಯವರಿಂದ ಸರಿಮಾಡಿಸಿದ್ದೇವೆ. ಇನ್ನೂ ಏನೇನು improvements ಮಾಡಬೇಕೋ ಅದನ್ನು ಮಾಡಬೇಕೆಂದಿದ್ದೇವೆ, ವರ್ಷೇ ವರ್ಷೇ ಕ್ರಮೇಣ ಅಲ್ಲಿಗೆಬೇಕಾದ furniture, lines ಮುಂತಾದುವುಗಳನ್ನೆಲ್ಲಾ ತರಿಸಿಕೊಡುತ್ತಿದ್ದೇವೆ.

ಮುಖ್ಯವಾಗಿ ಹೋಟೆಲಿನ ವಿಚಾರದಲ್ಲಿ ಅಲ್ಲಿ ಸರಿಯಾದ ಅನುಕೂಲಗಳಿಲ್ಲವೆಂಬುದು ನಿಜ. ಇದರ ವಿಚಾರದಲ್ಲಿ, ಶ್ರೀಮಾನ್ ಸಿದ್ದಪ್ಪನವರು ಹೇಳಿದಹಾಗೆ, ಏನುಮಾಡಬೇಕೆಂಬುದನ್ನು ಆಲೋಚನೆಮಾಡೋಣ. ಸರಿಯಾದ ಹೋಟೆಲಿನವರು ಯಾರಾದರೂ ಬಂದು ಅವರೇನಾದರೂ ಸೌಕರ್ಯಗಳನ್ನುಮಾಡಿಕೊಡಬೇಕೆಂದು ಕೇಳಿದರೆ, ಮಾಡಿಕೊಡುವುದಾಗಲೀ ಅಥವಾ ಬಾಡಿಗೆ ರಿಯಾಯಿತಿಯೋ ಅಥವಾ ಇನ್ನಾವುದಾದರೂ ಸಹಾಯವೋ ಮಾಡುವುದಕ್ಕಾಗಲಿ ಪ್ರಯತ್ನಮಾಡುತ್ತೇವೆ. ಮತ್ತು ಅಧಿಕಾರಿಗಳೂ ಯಾವ ರೀತಿ ಸೌಲಭ್ಯವನ್ನು ಒದಗಿಸಿಕೊಡಬೇಕೆಂಬ ಬಗ್ಗೆಯೂ ಸೂಚನೆ ಕೊಡುತ್ತೇನೆ.

(ಶ್ರೀ ಎಚ್. ಸಿದ್ದವೀರಪ್ಪ.)

ವಿದ್ಯುಚ್ಛಕ್ತಿಯ ಸರಬರಾಯಿನ ವಿಚಾರವಲ್ಲೂ ಸಹ, ಈಗ ತಮಗೆಲ್ಲಾ ಗೊತ್ತಿರುವಹಾಗೆ, ಅಲ್ಲೊಂದು ಡ್ರೈನವೋ ಈಗ ನಾಲ್ಕು ತಿಂಗಳಿನಿಂದ ನಡೆಯುತ್ತಿದೆ. ಅದಕ್ಕೆ ಬದಲು ಎಲೆಕ್ಟ್ರಿಕ್ ಟ್ರೈನ್ ಹಾಕಿಸಿಕೊಡುವುದು ಸಾಧ್ಯವೇ ಎಂಬುದನ್ನೂ ಯೋಚನೆಮಾಡುತ್ತೇವೆ.

ಇನ್ನು ಪ್ರಯಾಣ ಸೌಕರ್ಯದ ವಿಷಯದಲ್ಲಿ ನಿಜವಾಗಿಯೂ ಅಲ್ಲಿ ತೊಂದರೆಯಿದೆ. ಆ ಟ್ರೈನು ಅಷ್ಟು ಲಾಭದಾಯಕವಲ್ಲವೆಂದು ಯಾರೂ ಮುಂದೆಬರುತ್ತಿಲ್ಲ. ಹೀಗಿರುವಾಗ ನಾವೇ ಯಾರಿಗೇ ಆದರೂ ಹೋಗಿ ಈ ಟ್ರೈನನ್ನು ತೆಗೆದುಕೊಳ್ಳಿ ಎಂದು ಕೊಡುವುದು ಕಾನೂನಿಗೆ ವಿರುದ್ಧ. ಇದು ಆ ಎರಡು ಡಿಸ್ಟ್ರಿಕ್ಟ್‌ಗಳ State Transport Authority ಯವರಿಗೆ ಸಂಬಂಧಪಟ್ಟ ವಿಷಯ ಈ ಸಭೆಯ ಅಭಿಪ್ರಾಯವನ್ನು ತಿಳಿದವರಾಗಿ ಶ್ರೀಮಾನ್ ಪಟ್ಟಾಭಿರಾಮನ್‌ರವರೂ ಅಲ್ಲಿದ್ದಾರೆ. ನಾವೂ ನಮ್ಮ ಈ ಸಭೆಯ ಅಭಿಮತವೇನೆಂಬುದನ್ನೂ ಆ S.T.A. ಯವರಿಗೆ ತಿಳಿಸುತ್ತೇವೆ. ಕೊನೆಗೂ ಯಾರೂ ಬಸ್ ಓಡಿಸಲಿಕ್ಕೆ ಮುಂದೆ ಬಾರದೆ ಇದ್ದರೆ, ಸರ್ಕಾರವೇ ಇಲಾಖೆಯವರ ಮೂಲಕ ಒಂದು Seven Seater ವ್ಯಾನನ್ನು ಅಲ್ಲಿಟ್ಟು ಪ್ರಯಾಣಿಕರಿಗೆ ಅನುಕೂಲವಾಗುವಂತೆ ಆ season ನಲ್ಲಿ ಓಡಿಸಲು ಏರ್ಪಾಡುಮಾಡುವುದಕ್ಕೆ ಪ್ರಯತ್ನಿಸುತ್ತೇವೆ.

ಇನ್ನು ಬಾಕಿಯ ವಿಚಾರದಲ್ಲಿ ಹೆಚ್ಚಿಗೆ ಹೇಳಬೇಕಾದ್ದಿಲ್ಲ. ಈ ಈರ್ವರೂ ಕೊಟ್ಟಿರತಕ್ಕ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಈ ಹಿಲ್‌ಸ್ಟೇಷನ್ನನ್ನು ಎಷ್ಟರ ಮಟ್ಟಿಗೆ ಆಕರ್ಷಣೀಯವಾಗಿ ಮಾಡಬಹುದೋ ಅಷ್ಟುಮಾಡಬೇಕೆಂಬುದೇ ಸರ್ಕಾರದವರ ಆಸೆಯಾಗಿದೆ. ಆದ್ದರಿಂದ, ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Mr. SPEAKER.—What does the mover say?

Sri L. SIDDAPPA.—I seek the permission of the House to withdraw the cut motion.

The cut motion was, by leave, withdrawn.

Extending the activities of Gardens Department in the northern part of the State.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಸ್ವಾಮಿ, ನನ್ನ ಖೋತಾ ನಿರ್ಣಯ ಈ ರೀತಿ ಇದೆ, ಅದನ್ನು ಮಂಡಿಸುತ್ತೇನೆ.

> "The demand under the head "40 (h) Botanical and other public gardens" for Rs. 9,66,000 be reduced by Rs. 100 (to discuss the need for arranging to carry on the activities of the Department in the northern part of the State)."

ಮಾನ್ಯ ಮಂತ್ರಿಗಳು ಈ ಇಲಾಖೆಯ ಕೆಲಸ ಕಾರ್ಯಗಳ ವಿಚಾರವನ್ನು ಅವರ ಪ್ರಾರಂಭ ಭಾಷಣದಲ್ಲಿ ವಿವರಿಸುತ್ತಾ, ಮೈಸೂರು, ಬೆಂಗಳೂರು ನಗರಗಳಲ್ಲದೆ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಸಮರ್ಪಕವಾದ ಏರ್ಪಾಡುಮಾಡಿದೆಯೆಂದು ಹೇಳಿದರು. ನನಗೆ ತಿಳಿದ ಮಟ್ಟಿಗೆ ಮೈಸೂರು, ಮಂಡ್ಯ ಮತ್ತು ಬೆಂಗಳೂರು ಈ ಮೂರು ಡಿಸ್ಟ್ರಿಕ್ಟುಗಳಲ್ಲಿ ಇದರ ಕೆಲಸಗಳು ತಕ್ಕ ಮಟ್ಟಿಗೆ ಸಮರ್ಪಕವಾಗಿದೆ. ಬಾಕಿ ಜಿಲ್ಲೆಗಳಲ್ಲಿ, ಅದರಲ್ಲಿಯೂ ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಅಷ್ಟು ಸಮರ್ಪಕವಾಗಿಲ್ಲ. ಹಿಂದೆ 1947 ನೆಯ ಜನವರಿಯಲ್ಲಿ ಈ ಇಲಾಖೆಯನ್ನು ರೀಆರ್ಗನೈಸ್ ಮಾಡಿದಾಗ ಶಿವಮೊಗ್ಗದಲ್ಲಿ ಒಬ್ಬರು ಸೀನಿಯರ್ ಅಧಿಕಾರಿಗಳನ್ನು ನೇಮಿಸಿ ಅಲ್ಲಿ ಹೆಡ್‌ಕ್ವಾರ್ಟರುಮಾಡಿ ಮೂರು ನಾಲ್ಕು ಡಿಸ್ಟ್ರಿಕ್ಟುಗಳಲ್ಲಿ ಈ ಕೆಲಸ ಸರಿಯಾಗಿ ನಡೆಯುವುದಕ್ಕೆ ಏರ್ಪಾಡು ಮಾಡಿದರು. ಶಿವಮೊಗ್ಗದಲ್ಲಿ ಸರ್ಕಲ್ ಆಫೀಸು ಮಾಡಿ ಶಿವಮೊಗ್ಗ, ಚಿತ್ರದುರ್ಗ, ಹಾಸನ ಮತ್ತು ಚಿಕ್ಕಮಗಳೂರು, ಈ ನಾಲ್ಕು ಡಿಸ್ಟ್ರಿಕ್ಟುಗಳಲ್ಲಿ ನಡೆಯುವ ಕೆಲಸಗಳನ್ನು ಸೂಪರ್‌ವೈಸ್‌ಮಾಡುವುದಕ್ಕೆ ಏರ್ಪಾಡಾಗಿತ್ತು. ಈಚೆಗೆ ಪ್ರಾಯಶಃ ಏಕೋ ಆ ಕಛೇರಿಯನ್ನು ತೆಗೆದು ಹಾಕಿದರು. ಡಿಸ್ಟ್ರಿಕ್ಟಿಗೆ ಒಬ್ಬರು ಡಿಸ್ಟ್ರಿಕ್ಟ್ ಹಾರ್ಟಿಕಲ್ಚರಲ್ ಇನ್ಸ್‌ಪೆಕ್ಟರೆಂದು ಒಬ್ಬರು ಸೀನಿಯರ್ ಅಧಿಕಾರಿಯಿದ್ದು ಅವರ ಕೈಕೆಳಗೆ ಫೀಲ್ಡ್ ಮೆನ್ ಇದ್ದು ಕೆಲಸವನ್ನು ಮಾಡುತ್ತಾರೆ. ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಒಂದೊಂದು ನರ್ಸರಿಯನ್ನು ಪ್ರಾರಂಭಮಾಡಿ ಶಿವಮೊಗ್ಗದಲ್ಲಿ ತುಂಗಾ ನದಿಯದಡದಲ್ಲಿ ಇಲಾಖೆಯವರು ಕೆಲಸ ಕಾರ್ಯವನ್ನು ಪ್ರಾರಂಭಿಸಿದ್ದಾರೆ. ನಾನು ಅಲ್ಲಿಗೆ ಎರಡು ಸಾರಿ ಹೋಗಿ ನೋಡುವ ಅವಕಾಶದೊರಕಿತ್ತು. ಅಲ್ಲಿ ನದಿಯ ಬಳಿ ಬೇಲಿ ಹಾಕುವುದಕ್ಕೆ ಸರ್ಕಾರದ ಮಂಜೂರಾತಿ ತೆಗೆದುಕೊಳ್ಳುವುದಕ್ಕೆ ಪಂಪು ಹಾಕಿ ನೀರೆತ್ತುವುದಕ್ಕೆ ಪ್ರಯತ್ನಮಾಡುತ್ತಿರುವುದಾಗಿ ಹೇಳಿದರು. ಒಂದು ವರ್ಷದಿಂದೀಚೆಗೆನಾನು ಅಲ್ಲಗೆಹೋಗಿಲ್ಲ. ನಾನು ಎರಡನೆಯ ಸಾರಿ ಹೋದಾಗ ಕೂಡ ನೀರಿಗೆ ಸರಿಯಾದ ಏರ್ಪಾಡಿರಲಿಲ್ಲ. ನೀರನ್ನು ಹಾಕುವುದಕ್ಕೆ ಏನು ಏರ್ಪಾಡುಮಾಡಿದ್ದೀರೆಂದು ಕೇಳಿದೆ. ಅದಕ್ಕೆ ನಮಗೆ ಸರ್ಕಾರಿ ಮಂಜೂರಾತಿ ಇನ್ನೂ ಬಂದಿಲ್ಲವೆಂದು ಹೇಳುತ್ತಿದ್ದರು. ಆದುದರಿಂದ ನಾನು ಹೇಳುವುದೇನೆಂದರೆ, ಡಿಸ್ಟ್ರಿಕ್ಟುಗಳಲ್ಲಿ ಸರಿಯಾದ ಕಡೆ ನರ್ಸರಿ ಇಟ್ಟು ಗಿಡಗಳನ್ನು ಬೆಳೆಸುವುದಕ್ಕೆ ಏರ್ಪಾಡುಮಾಡಬೇಕು. ಅಲ್ಲದೆ ಹಳ್ಳಿಗಳಿಗೆ ಹೋಗಿ ಸ್ವಲ್ಪ ಪ್ರಚಾರ ನಡೆಸಬೇಕು. ಈಚೆಗೆ ಹಳ್ಳಿಗಳಲ್ಲಿ ಜನರಿಗೆ ಹಣ್ಣಿನ ಗಿಡಗಳನ್ನು ಜಾಸ್ತಿ ಬೆಳೆಯುವುದರಲ್ಲಿ ಆಸಕ್ತಿ ಸ್ವಲ್ಪ ಮಟ್ಟಿಗೆ ಹುಟ್ಟುತ್ತಿದೆ. ಇದನ್ನು ಬೆಳೆಸಬೇಕು. ವನಮಹೋತ್ಸವ ಮುಂತಾದ ಕಾಲದಲ್ಲಿ ಹಳ್ಳಿಗಾಡಿಗೆ ಹೋಗಿ ಗ್ರಾಮ ಪಂಚಾಯಿತಿ ಮತ್ತು ಇತರ ಸಂಘ ಸಂಸ್ಥೆಗಳಲ್ಲಿ ಅವರಿಗೆ ಆಸಕ್ತಿಯಿದ್ದರೆ ಸುಲಭವಾಗಿ ಗಿಡಗಳನ್ನು ಬೆಳೆಯುವುದಕ್ಕೆ ಅವಕಾಶಮಾಡಬೇಕು. ನಾನು ಹೇಳಿದ ಹಾಗೆ, ಸಂಸ್ಥಾನದ ಉತ್ತರಭಾಗದಲ್ಲಿ, ಎಷ್ಟು ಮಟ್ಟಿಗೆ ನಡೆಯುತ್ತಿದೆಯೋ ಈ ಚಳುವಳಿ, ದಕ್ಷಿಣದಲ್ಲಿ ಅಷ್ಟು ಮಟ್ಟಿಗೆ ನಡೆಯುತ್ತಿಲ್ಲ. ಖರ್ಚು ಕಡಮೆಮಾಡಿ ಎಂದು ಒಂದು ಕಡೆ ಕೇಳುತ್ತಾರೆ, ಇಲ್ಲಿಹೀಗೆ ಹೇಳುತ್ತಾರಲ್ಲ, ಎಂದು ಕೇಳಬಹುದು. ಅದಕ್ಕೆ ನನ್ನ ಉತ್ತರವಿಷ್ಟೆ, ಜನರಿಗೆ ಅನುಕೂಲವಾಗತಕ್ಕ ಕೆಲಸ ಕಾರ್ಯಗಳಿಗೆ ಸ್ವಲ್ಪ ಜಾಸ್ತಿ ಖರ್ಚಾದರೂ ಚಿಂತೆಯಿಲ್ಲ. ಈಗಲೂ ನನ್ನ ಸಲಹೆಯನ್ನು ಅಂಗೀಕಾರಮಾಡುವುದಾದರೆ ಶಿವಮೊಗ್ಗದಲ್ಲಿ ಹಿಂದಿದ್ದ ಸರ್ಕಲ್ ಆಫೀಸನ್ನು

ಇಟ್ಟುಕೊಳ್ಳಲು ಏರ್ಪಾಡುಮಾಡಿ, ಅಲ್ಲಿಗೆ ಅಧಿಕಾರಿಗಳನ್ನು ಕೊಟ್ಟು, ಅವರಿಗೆ ಏನು ಕೆಲಸವನ್ನು ಗೊತ್ತು ಮಾಡುತ್ತೀರೋ ಅದನ್ನು ಅವರು ಮಾಡಲು ತಕ್ಕ ಏರ್ಪಾಡುಮಾಡಬೇಕು. ಅಲ್ಲಿ ಒಳ್ಳೆಯ ಕೆಲಸ ಕಾರ್ಯಗಳು ಸರಿಯಾಗಿ ನಡೆಯುವಂತೆ ವ್ಯವಸ್ಥೆಮಾಡಬೇಕೆಂದು ನನ್ನ ಸೂಚನೆ.

ಶಿವಮೊಗ್ಗದಲ್ಲಲ್ಲದೆ ಚಿತ್ರದುರ್ಗ ಟೌನಿಗೆ ಎಂಟು ಹತ್ತು ಮೈಲಿಯಲ್ಲಿ ಒಂದು ನರ್ಸರಿ ಇದೆ. ಅಲ್ಲಿಗೂ ಹೋಗಿದ್ದೆ. ಅಲ್ಲಿಯೂ ಎಷ್ಟು ಸಮರ್ಪಕವಾಗಿ ಕೆಲಸಮಾಡಬೇಕೋ ಅಷ್ಟು ಸಮರ್ಪಕವಾಗಿ ಕೆಲಸಮಾಡಲು ಅಲ್ಲಿರುವ ನೌಕರರುಗಳಿಗೆ ತಕ್ಕ ಸೌಲಭ್ಯಗಳನ್ನು ಮಾಡಿಕೊಟ್ಟಲ್ಲಿ ಇರುವ ನ್ಯೂನತೆಗಳನ್ನು ಸರಿಪಡಿಸಿ ಹೆಚ್ಚಾಗಿ ಗ್ರಾಮಾಂತರಗಳಲ್ಲಿ ಹೊಸ ಹೊಸ ತರಕಾರಿ, ಹಣ್ಣಿನ ಗಿಡಗಳನ್ನು ಬೆಳೆಸಲು ಏರ್ಪಾಡುಮಾಡುವುದಲ್ಲದೆ, ಸಾರ್ವಜನಿಕ ಸಂಸ್ಥೆಗಳು, ಹಾಸ್ಟೆಲುಗಳು ಮುಂತಾದ ಸಂಸ್ಥೆಗಳ ಮೂಲಕ ಹೆಚ್ಚು ಗಿಡಗಳನ್ನು ಬೆಳೆಸುವುದಕ್ಕೆ ತಕ್ಕ ಏರ್ಪಾಡುಮಾಡಬೇಕೆಂದು ಸಭೆಯ ಮುಂದೆ ಈ ಖೋತಾ ನಿರ್ಣಯವನ್ನಿಟ್ಟಿದ್ದೇನೆ.

Mr. SPEAKER.—Cut motion moved :

"That the demand be reduced by Rs. 100."

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು—ಮೂಡಿಗೆರೆ).—ಸ್ವಾಮಿ ಮಾನ್ಯಸದಸ್ಯರಾದ ಶ್ರೀಮಾನ್ ಸಿದ್ದಪ್ಪನವರು ಸಭೆಯ ಮುಂದಿಟ್ಟಿರತಕ್ಕ ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತಾ ಎರಡು ಮಾತುಗಳನ್ನಾಡಲು ಆಶಿಸುತ್ತೇನೆ. ಸಂಸ್ಥಾನದ ದಕ್ಷಿಣ ಭಾಗದಲ್ಲಿ ಅನುಕೂಲ ಹೆಚ್ಚಾಗಿದೆ. ಅದೇ ಉತ್ತರ ಭಾಗದಲ್ಲಿ ಏನೂ ನಡೆಯುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಎಲ್ಲಿ ಚೆನ್ನಾಗಿ ಮರಗಿಡಗಳು ಬೆಳೆಯುತ್ತವೆಯೋ ಅಲ್ಲಿ ಬೆಳೆಸಲು ಗಮನ ಕೊಡುತ್ತಿಲ್ಲ. ಮುಂದಾದರೂ ಇದಕ್ಕೆ ಗಮನ ಕೊಡುವುದು ಅವಶ್ಯಕ. ಇದರಿಂದ ನಮ್ಮ ದೇಶದ ಪ್ರಕೃತಿ ಸಂಪತ್ತು ಹೆಚ್ಚುತ್ತದೆ. ಅಲ್ಲದೆ ನಮ್ಮ ಜಿಲ್ಲೆಯಲ್ಲಿ ಬಾಬಾಬುಡನ್‌ಗಿರಿ ಇದೆ. ಅನೇಕ ಅಮೂಲ್ಯವಾದ ಗಿಡಗಳೂ, ಮೂಲಿಕೆಗಳೂ ಚೆನ್ನಾಗಿ ಬೆಳೆಯುತ್ತವೆ. ಅವುಗಳನ್ನು ಹೆಚ್ಚಿಸುವುದಕ್ಕೆ ಗಮನಕೊಡುತ್ತಿಲ್ಲ. ಹೀಗಾಗಿ ಅವು ಹಾಳಾಗುತ್ತವೆ. ಆದುದರಿಂದ ಅಲ್ಲಿ ಒಂದು ಕೇಂದ್ರವನ್ನೂ ಸ್ಥಾಪಿಸಿ ಅದರಿಂದ ನಮ್ಮ ದೇಶಕ್ಕೆ ಹೆಚ್ಚು ಅನುಕೂಲಮಾಡಬೇಕೆಂದು ಕೇಳುತ್ತೇನೆ. ನಮ್ಮ ಡಿಸ್ಟ್ರಿಕ್ಟ್ ಬೋರ್ಡ್ ನರ್ಸರಿ ಇದೆ. ಹಳ್ಳಿಯವರು ಎಮ್ಮೆದೊಡ್ಡಿ ಕಿತ್ತಳೆ ಹಣ್ಣಿನ ಬೀಜ ಬೇಕೆಂದು ಕೇಳುತ್ತಾರೆ. ಅದನ್ನು ಬೆಳೆಯಬೇಕೆಂದು ಹಳ್ಳಿಯವರಿಗೆ ಆಸೆ, ಆದರೆ ಸಿಕ್ಕುವುದಿಲ್ಲ. ಇದರಿಂದ ನಿರಾಶರಾಗುತ್ತಾರೆ. ಸರ್ಕಾರದವರು ಹೆಚ್ಚು ಗಮನಕೊಡುತ್ತಾ ಇಲ್ಲ. ಮಾನ್ಯ ಸದಸ್ಯರು ಹೇಳಿದ ಸಲಹೆಗಳಿಗೆ ಬೆಂಬಲಕೊಡುತ್ತಾ ಸರ್ಕಾರದವರು ಇದಕ್ಕೆಲ್ಲಾ ತಕ್ಕ ಏರ್ಪಾಡುಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಮಂತ್ರಿಗಳು).—ಸ್ವಾಮಿ, ಮಾನ್ಯ ಸದಸ್ಯರು ಹೇಳಿದ ಅಭಿಪ್ರಾಯಗಳು ಸ್ವಾಗತಾರ್ಹವಾಗಿವೆ. ಆದರೆ ಒಂದು ವಿಷಯದಲ್ಲಿ ಮಾತ್ರಕ್ಕೆ ಎರಡುಮಾತುಗಳನ್ನು ಹೇಳಬೇಕಾಗಿದೆ. ಆ ಭಾಗ ಈ ಭಾಗವೆಂದಲ್ಲ, ಒಟ್ಟಿನಲ್ಲಿ ಎಲ್ಲಾ ಭಾಗದಲ್ಲಿಯೂ ಹಳ್ಳಿಗಳಿಗೆ ಹೋಗಬೇಕಾದುದು ಬಹಳಮುಖ್ಯ. ಇದರ ಫಲ ಹಳ್ಳಿಗಳಿಗೆ ಸೇರಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. 1947ನೆಯ ಇಸವಿಯಿಂದೀಚೆಗೆ ಹಳ್ಳಿಗಳ ಕಡೆ ಸರ್ಕಾರದ ಗಮನಹೋಗಿದೆಯೆಂಬುದನ್ನು ಮರೆಯಬಾರದು. ಈ ವಿಷಯದಲ್ಲಿ ಸರಿಯಾದ ಮಾರ್ಗದಲ್ಲಿ ಹೋಗಬೇಕೆಂಬ ಅಭಿಪ್ರಾಯವನ್ನು ಸ್ವಾಗತಿಸುತ್ತೇನೆ. ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಒಂದೊಂದು ನರ್ಸರಿ ಇದೆ. ಮಾನ್ಯ ಸದಸ್ಯರು ಹೇಳಿದಂತೆ ಇವು ಎಷ್ಟುಮಟ್ಟಿಗೆ ಕೆಲಸ ಮಾಡಬೇಕೋ ಅಷ್ಟುಮಟ್ಟಿಗೆ ಕೆಲಸ ಮಾಡುತ್ತಿಲ್ಲ. ಕೆಲವುಕಡೆ ನೀರಿನ ತೊಂದರೆಯಿದೆ. ಕೆಲವು ಕಡೆ ಹೊಸದಾಗಿ ಆಗುತ್ತಿರುವುದರಿಂದ ಇನ್ನೂ ಸರಿಯಾಗಿ ನಡೆಯುತ್ತಿಲ್ಲ. ಇನ್ನುಮೇಲೆ ಗ್ರಾಮಾಂತರಗಳ ಕಡೆ ಬೆಳೆಯುವುದಕ್ಕೆ, ಇದರ ಪ್ರಯೋಜನ ಅಲ್ಲಿ ಆಗುವುದಕ್ಕೆ ಏನು ಕೆಲಸ ಮಾಡಬೇಕೋ ಮಾಡುತ್ತೇವೆ. ಈಗ ಬಂದ ಸಲಹೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುತ್ತೇವೆ. ಆದುದರಿಂದ ದಯವಿಟ್ಟು ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

The cut motion was, by leave, withdrawn.

Allotment of land in Malavalli Tank Bed for growing vegetables and betel leaves.

4-30 P.M.

Sri K. CHIKKALINGIAH (Malavalli Scheduled Castes).—

I beg to move :

"That the demand under the head "40 (h) Botanical and other Public Gardens" for Rs. 9,66,000 be reduced by Rs. 100 (to urge the importance of allotting 25 acres of land to 100 families in Malavalli Tank Bed for growing vegetables and betel leaves)."

ಸ್ವಾಮಿ, ಈ ಖೋತಾ ನಿರ್ಣಯವನ್ನು ಈ ಸಭೆಯ ಒಪ್ಪಿಗೆ ಬಗ್ಗೆ ಮಂಡಿಸುತ್ತಾ ಎರಡು ಅಂಶಗಳನ್ನು ಮಾತ್ರ ತಿಳಿಸುತ್ತೇನೆ. ಮಾನ್ಯ ಸಚಿವರು ಈಗಾಗಲೇ ಭರವಸೆ ಕೊಟ್ಟಿದ್ದಾರೆ. ಈ ಇಲಾಖೆಯಲ್ಲಿ ನಡೆಯತಕ್ಕ ಕಾರ್ಯ ಕಲಾಪಗಳನ್ನೂ ಎಲ್ಲಾಕಡೆಗೂ, ಗ್ರಾಮಾಂತರಗಳಿಗೂ ವಿಸ್ತರಿಸಿ ಹೆಚ್ಚಾಗಿ ತರ್ಕಾರಿ, ಹಣ್ಣು, ವಗೈರೆ ಬೆಳೆಯಲು ಒತ್ತಾಯ ಮಾಡುವುದಾಗಿ ತಿಳಿಸಿದ್ದಾರೆ. ನನ್ನ ಖೋತಾ ನಿರ್ಣಯಕ್ಕೂ ಅದೇ ರೀತಿಯಲ್ಲಿ ಬೆಂಬಲ ದೊರೆಯುತ್ತದೆಂದು ನಂಬಿದ್ದೇನೆ.

ಮಳವಳ್ಳಿ ಟೌನಿನಲ್ಲಿ ಗಂಗಾಮತಸ್ತರ ಜನಾಂಗವು ಸಾಧಾರಣವಾಗಿ ಸುಮಾರು ಒಂದುಸಾವಿರ ಸಂಸಾರಗಳಷ್ಟಿದೆ. ಮಲೇರಿಯಾ ತಡೆಗಟ್ಟಲು ಡ್ರೈಬೆಲ್ಟ್ ಮಾಡಿದಾಗ 140 ಜನರಿಗೆ ಸರಿಯಾದ ಜಮೀನಿಲ್ಲದೆ ಜೀವನಕ್ಕೆ ತೊಂದರೆಯಾಯಿತು. ವೀಳೆದೆಲೆ ಮತ್ತು ತರಕಾರಿ ಬೆಳೆಯೇ ಅವರಿಗೆ ಮುಖ್ಯವಾದ ಜೀವನಾಧಾರ. ಈ ಜನಾಂಗದ ಹಿತದೃಷ್ಟಿಯಿಂದ ಮತ್ತು ನಮ್ಮ ಟೌನಿನಲ್ಲಿ ಯಾವ ತರ್ಕಾರಿಯೂ ಹೆಚ್ಚಾಗಿಲ್ಲದಿರುವುದರಿಂದ, ವೀಳೆದೆಲೆ ತೋಟ ಬಹಳ ಮುಖ್ಯವಾದ

(ಶ್ರೀ ಕೆ. ಚಿಕ್ಕಲಿಂಗಯ್ಯ.)

ಕೈಗಾರಿಕೆಯಾದ್ದರಿಂದ, ಜನರ ಆರ್ಥಿಕಸ್ಥಿತಿ ಇದರಿಂದ ಬಹಳ ಜಾಗ್ರತೆಯಾಗಿ ಅಭಿವೃದ್ಧಿಯಾಗುತ್ತದೆಂಬ ಉದ್ದೇಶದಿಂದ ಈ ಖೋತಾ ನಿರ್ಣಯವನ್ನು ತಂದಿದ್ದೇನೆ. ದಯವಿಟ್ಟು ಮಳವಳ್ಳಿಯಲ್ಲಿ ಬ್ರೀಚ್ ಆಗಿರುವ ಕೆರೆ ಅಂಗಳದಲ್ಲಿ 25 ಎಕರೆಯನ್ನು ಮಾತ್ರ ಕೊಟ್ಟರೆ ಒಂದೊಂದು ಸಂಸಾರಕ್ಕೆ ಹತ್ತು ಗುಂಟೆ ಸಿಕ್ಕುತ್ತದೆ. ಈ 25 ಎಕರೆಯಿಂದ ನೂರು ಸಂಸಾರಕ್ಕೆ ಜೀವನ ಕಲ್ಪಿಸಿ, ತನ್ಮೂಲಕ ಅವರ ಆರ್ಥಿಕ ಪರಿಸ್ಥಿತಿ ಉತ್ತಮವಾಗುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತಾರೆ. ಉದಾರವಾಗಿ ಇದನ್ನು ಮಂಜೂರು ಮಾಡುತ್ತಾರೆ ಎಂದು ನಂಬಿ, ಈ ಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved :

"That the demand be reduced by Rs. 100."

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಶ್ರೀಮಾನ್ ಚಿಕ್ಕಲಿಂಗಯ್ಯನವರು ತಂದಂಥ ಈ ಸೂಚನೆಯನ್ನು ಅನುಮೋದಿಸುತ್ತಾ ನಾಲ್ಕು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಏಕೆಂದರೆ, ವಿಳ್ಳೇದೆಲೆ ಬೆಳೆಯುವುದು ಒಂದು ಗೃಹಕೈಗಾರಿಕೆ. ಪ್ರತಿಯೊಬ್ಬರೂ—ಗಂಡಸರೂ ಹೆಂಗಸರೂ—ಸ್ವಲ್ಪ ಜಮೀನಿದ್ದರೆ ಸುಖವಾಗಿ ನಾಲ್ಕು ಕವಳಿಗೆ ಎಲೆಕಟ್ಟು ಕೋಟವಾಡಿದರೆ ತಮ್ಮ ತಾಪತ್ರಯನೀಗಿಕೊಳ್ಳಬಹುದು. ಇದು ಬಹಳ ಒಳ್ಳೆಯ ಕೆಲಸ. ಮಾನ್ಯ ಸದಸ್ಯರು ಹೇಳಿದಹಾಗೆ, ಇದರಿಂದ ಆರ್ಥಿಕಸ್ಥಿತಿ ಉತ್ತಮವಾಗುವುದಲ್ಲದೆ ಆರೋಗ್ಯವೂ ಹೆಚ್ಚುತ್ತದೆ. ಇದರಲ್ಲಿ ಸ್ವಲ್ಪ ಬದಲಾವಣೆಮಾಡಿದರೆ ಒಳ್ಳೆಯದು. ಏಕೆಂದರೆ ಒಂದೊಂದು ಪ್ರಾಂತದಲ್ಲಿ ಬೆಳೆಯುವ ಎಲೆಗಳಲ್ಲಿ ಕಾರ ಜಾಸ್ತಿ. ಮೈಸೂರಿನ ವಿಳ್ಳೇದೆಲೆ ಪ್ರಸಿದ್ಧಿ. ಹಾಗೆಯೇ ಚಿತ್ರದುರ್ಗ ಜಿಲ್ಲೆ ಗುಡ್ಡದರಂಗನಹಳ್ಳಿ ಎಲೆ ಬಹಳ ಒಳ್ಳೆಯದು. ಈ ವಿಚಾರದಲ್ಲಿ ಶೋಧನೆಮಾಡಿ, ತಜ್ಞರ ಅಭಿಪ್ರಾಯಪಡೆದು ಒಳ್ಳೆ ಎಲೆ ಬೆಳೆಯಬೇಕು. ಅದರಿಂದ ಜನರ ಆರೋಗ್ಯವೂ ಹೆಚ್ಚುತ್ತದೆ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದ ಹಾಗಾಗುವುದು. ಹೀಗೆ ಮಾಡಲು ಏರ್ಪಾಡುಮಾಡಿ ಜಮೀನಿಲ್ಲದಿರುವವರಿಗೆ ಎಲೆ ಬೆಳೆಯಲು ಜಮೀನುಕೊಟ್ಟು, ಅದರ ಜೊತೆಗೆ ನೀರು ಸರಬರಾಯಿಗೆ ಪಂಪು ಸಲಕರಣೆ ಕೊಟ್ಟದ್ದೇ ಆದರೆ, ಜನರ ಆರ್ಥಿಕಮಟ್ಟ ಸುಧಾರಿಸುವುದಕ್ಕೆ ಸಹಾಯವಾಗುತ್ತದೆ ಮತ್ತು ಆರೋಗ್ಯವೂ ಬರುತ್ತದೆ. ಇದು ಬಹಳ ಒಳ್ಳೆಯ ಯೋಜನೆ, ಅನುಮೋದಿಸಬೇಕು ಎಂದು ತೋರಿದ್ದರಿಂದ, ಬಹಳ ಒಳ್ಳೆಯದೆಂದು ಕಂಡಿದ್ದರಿಂದ, ನಾನು ಈ ಖೋತಾ ಸೂಚನೆಯನ್ನು ಸಮರ್ಥನೆ ಮಾಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ನನ್ನ ಮಾನ್ಯ ಸ್ನೇಹಿತರಾದ ಚಿಕ್ಕಲಿಂಗಯ್ಯನವರು ಜಮೀನುಕೊಡಬೇಕೆಂದು ಹೇಳಿದ್ದಾರೆ. ಒಂದನೆಯದು ಜಮೀನು ಕೊಡುವ ಮಾನ್ಯ ಮಂತ್ರಿಗಳು (ಶ್ರೀ ಕಡಿದಾಳ್ ಮಂಜಪ್ಪನವರು) ಈ ದಿವಸ ಇಲ್ಲಿಲ್ಲ.

Sri L. SIDDAPPA.—Government is one.

Sri H. SIDDAVEERAPPA.—Of course. Government is one, but he has to act.

ಇನ್ನೊಂದು ಕೃಷ್ಣರಾಜಸಾಗರ ಕೆರೆಯಲ್ಲಿ ನೀರ ಕಡಮೆಯಾಗುತ್ತಿರುವುದರಿಂದ ಮಂಡ್ಯ, ಮಳವಳ್ಳಿ ಕಡೆ ಬ್ರೀಚ್ ಆಗಿರುವ ಕೆರೆಗಳನ್ನು ಜೀರ್ಣೋದ್ಧಾರಮಾಡಬೇಕೆಂಬ ಚಳವಳಿಯಿದೆ. ತಾವು ಕೇಳಿರುವ ಕೆರೆಯು ಆ ಗುಂಪಿಗೇ ಸೇರುತ್ತದೆಂದು ಕೇಳಿದ್ದೇನೆ; ಹಾಗೆ ಒಡೆದು ಹೋದ ಕೆರೆಗಳನ್ನು ಜೀರ್ಣೋದ್ಧಾರಮಾಡಿದ ಮೇಲೆ ನಿರ್ಣಯದಲ್ಲಿ ಕೇಳಿರುವ ಪ್ರಶ್ನೆ ಏಳುವುದಿಲ್ಲ. ಆದ್ದರಿಂದ ನನಗೆ ಕಾಣುವುದು, ಇದರಲ್ಲಿ ಕೇಳುವುದಕ್ಕಿಂತ ಬೇರೆ ಕಡೆ ಜಮೀನು ಕೇಳಿದರೆ ಇಲಾಖೆಯಿಂದ ಬೀಜ, ಸಲಕರಣೆ ಕೊಡಬಹುದು. ಬೇರೆ ಜಮೀನು ನೋಡಿ ಎಂದು ಹೇಳಬೇಕಾಗಿದೆ.

For reasons explained by me, I hope my friend would be good enough to withdraw the cut motion.

The cut motion was, by leave, withdrawn.

Mr. SPEAKER.—Next cut motion stands in the name of Sri Nagaraja Murthy. Is the Hon'ble Member going to move it in view of the previous motion ?

Sri B. P. NAGARAJA MURTHY (Malavalli).—I will only say how economy could be effected.

Mr. SPEAKER.—You had one or two chances to move other cut motions. I want others to have a chance.

Sri B. P. NAGARAJA MURTHY.—I do not take more than two or three minutes. I find in some places people attached to this work are wandering without work.

Sri H. SIDDAVEERAPPA.—I will see to that. (Laughter).

Sri B. P. NAGARAJA MURTHY.—In view of the assurance, I will not move my cut motion. Laughter).

Improving the gardens at Tumkur.

ಶ್ರೀ ಟಿ. ಎಕ್. ಮೂಡಲಗಿರಿಗೌಡ (ಕುಣಿಗಲು).—ಸ್ವಾಮಿ, ನನ್ನ ಖೋತಾ ಸೂಚನೆ ಈ ರೀತಿಯಿದೆ ಅದನ್ನು ಮಂಡಿಸುತ್ತೇನೆ :—

"ತುಮಕೂರಿನಲ್ಲಿರುವ ಉದ್ಯಾನಗಳನ್ನು ಉತ್ತಮಗೊಳಿಸಿರುವುದಿಲ್ಲ ಮತ್ತು ಡಿಸ್ಟ್ರಿಕ್ಟು ಕಸಬೆಯಲ್ಲಿ ಕೆಲಸಕಾರ್ಯಗಳು ಸಮರ್ಪಕವಾಗಿ ಮುಂದುವರಿದಿಲ್ಲವೆಂಬ ವಿಚಾರದಲ್ಲಿ ಚರ್ಚೆ ನಡೆಯಿಸುವುದಕ್ಕಾಗಿ, 40 (h) ಬೊಟಾನಿಕಲ್ ಮತ್ತು ಇತರ ಸರ್ಕಾರಿ ಉದ್ಯಾನಗಳು ಎಂಬ ಬಾಬಿನಲ್ಲಿ ಕೋರಿರತಕ್ಕ 9,66,000 ರೂಪಾಯಿಗಳ ಡಿಮ್ಯಾಂಡ್ ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆಮಾಡಬೇಕು."

ಸ್ವಾಮಿ, ಈ ತೋಟಗಳ ಅಭಿವೃದ್ಧಿಕಾರ್ಯ ಬರೀ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳೆರಡರಲ್ಲೇ ಕೇಂದ್ರೀಕೃತವಾಗಿದೆ. ಸಾಧಾರಣವಾಗಿ ಒಂದು ತತ್ವ ದೃಷ್ಟಿಯಿಂದ ನೋಡಿದರೆ, ಈ ಎರಡು ಪಟ್ಟಣಗಳಲ್ಲಿರ ತಕ್ಕಂಥ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳು ಇದರ ಕೆಲಸ ಕಾರ್ಯಗಳನ್ನು ಚೆನ್ನಾಗಿ ನಡೆಸಿಕೊಂಡು ಬರಲು ಸಹಕಾರಿಯಾಗಿವೆ. ಈ ತತ್ವವನ್ನು ಸಾಮಾನ್ಯ ವಾಗಿ ಇಡೀ ದೇಶದ ಎಲ್ಲಾ ಕಡೆಗೂ ಅನ್ವಯಿಸಬೇಕಾ ದದ್ದು ಸಾಧ್ಯವಾದುದು, ಹಾಗಿಲ್ಲದೆ ಬರೀ ಎರಡು ಪಟ್ಟಣಗಳಲ್ಲಿ ಮಾತ್ರ ಈ ಉದ್ಯಾನವನಗಳನ್ನು ಮೈಂಟೈನ್ ಮಾಡುವ ಕೆಲಸವನ್ನಿಟ್ಟುಕೊಂಡರೆ ತತ್ವ ದೃಷ್ಟಿಯಿಂದ ಇದಕ್ಕಾಗಿ ಒದಗಿಸಿರುವ 9,66,000 ರೂಪಾಯಿಗಳನ್ನು ಸರ್ಕಾರ ಖರ್ಚುಮಾಡುವುದು ಸರಿಯೆ ಎಂಬುದನ್ನು ನಾವು ಯೋಚನೆಮಾಡಬೇಕಾ ಗಿದೆ. ಇತರ ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿ, ಗ್ರಾಮ ಪಂಚಾಯಿತಿಗಳಲ್ಲಿ, ಮುನಿಸಿಪಾಲಿಟಿಯಿರುವ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಈ ಉದ್ಯಾನವನಕ್ಕೆ ಮುನಿಸಿ ಪಾಲಿಟಿಯಲ್ಲದೆ ಸರ್ಕಾರದವರು ಒಂದು ಕಾಸುಕೂಡ ಖರ್ಚುಮಾಡುತ್ತಿಲ್ಲ. ಯಾವುದೋ ಒಂದು ಕಾಲದಲ್ಲಿ ಯಾವುದೋ ರಾಯನ ಕಾಲದಲ್ಲಿ ತಮ್ಮ ಒಂದು ಸಂತೋಷಕ್ಕಾಗಿ ಉದ್ಯಾನವನವನ್ನು ಬೆಳೆಸಿಕೊಂಡು ಬಂದು ಅದಕ್ಕಾಗಿ ನಾವು ಈ ಹಣವನ್ನು ಇಷ್ಟು ಹೆಚ್ಚಾಗಿ ಖರ್ಚುಮಾಡುವುದು ಸರಿಯಲ್ಲ. ಇದನ್ನು ಈಗ ಖರ್ಚು ಮಾಡುವುದು ಸಾಧುವಾದುದೆಂದು ಕಂಡರೆ, ಇತರ ಕಡೆ ಗಳಿಗೂ ಕೂಡ, ಆದಷ್ಟು ದಾಮಾಷಾ ಪ್ರಕಾರ ಜಿಲ್ಲೆ ಮತ್ತು ತಾಲ್ಲೂಕು ಹೆಡ್‌ಕ್ವಾರ್ಟರು ಮತ್ತು ಗ್ರಾಮ ಪಂಚಾಯಿತಿಗಳಿಗೆ ಎಲ್ಲಾ ಕಡೆಗೂ ಹಣಕೊಡಬೇಕು. ಅಲ್ಲದೆ ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿ ಈ ಇಲಾಖೆಗೆ ಸಂಬಂಧಪಟ್ಟ ಒಂದೊಂದು ಶಾಖೆ ಇದೆ. ಈ ಶಾಖೆ ಗಳಲ್ಲಿ ಏನು ಕೆಲಸ ಕಾರ್ಯ ನಡೆಯುತ್ತಿದೆಯೆಂಬುದು ಮಾನ್ಯ ಸದಸ್ಯರಿಗೆ ಗೊತ್ತು, ಈಗ ತಾನೆ ನಮ್ಮ ಮಂತ್ರಿ ಗಳು ಜವಾಬುಕೊಡುವ ಸಂದರ್ಭದಲ್ಲಿ ಒಳ್ಳೆಯ ಬೀಜ ಹಂಚುತ್ತೇವೆಂದು ಹೇಳಿರುವುದಕ್ಕಿಂತಲೂ ಇನ್ನೇನೂ ಹೆಚ್ಚಿನ ಕೆಲಸ ಕಾರ್ಯನಡೆಯುತ್ತಿಲ್ಲವೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ತುಮಕೂರನ್ನು ಸಾಮಾನ್ಯ ವಾಗಿ ನೋಡಿರುವ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಈ ಪಟ್ಟಣವನ್ನು ಸೇರುವುದಕ್ಕೆ ಪೂರ್ವಭಾವಿಯಾಗಿ, ಬೆಂಗಳೂರು, ತುಮಕೂರು ರಸ್ತೆಯಲ್ಲಿ ಸೋನೇ ಕಟ್ಟೆಯ ಬಳಿ ಸೋಮೇಶ್ವರ ದೇವಸ್ಥಾನವಿರುವುದನ್ನು ನೋಡಿರಬಹುದು. ಈ ದೇವಸ್ಥಾನದ ಪಕ್ಕದ 8–10 ಎಕರೆ ಜಮೀನನ್ನು ಈ ಇಲಾಖೆಯ ವಶಕ್ಕೆ ಕೊಟ್ಟಿ ದ್ದಾರೆ. ಈಗಿರುವ ನಮ್ಮ ಮಾನ್ಯ ಅಧ್ಯಕ್ಷರು ಮಂತ್ರಿ ಗಳಾಗಿದ್ದಾಗ ಆ ಉದ್ಯಾನ ವನದಲ್ಲಿ ಒಂದು ಪ್ರಾರಂಭೋತ್ಸವವನ್ನು ನೆರವೇರಿಸಿದರು, ನಾನು ಆಗ ಡೆವಲಪ್‌ಮೆಂಟ್ ಕಮಿಟಿ ಛೇರ್ಮನ್ ಆಗಿದ್ದೆ. ಆದಕಾರಣ ಈ ಬಗ್ಗೆ ನಡೆಯುತ್ತಿರುವ ವಾಸ್ತ ವಾಂಶಗಳು ನನಗೆ ಗೊತ್ತು. ಮೊದಮೊದಲು ತುಮಕೂರಿನಲ್ಲಿ ಉದ್ಯಾನವನ ಬಹಳ ಚೆನ್ನಾಗಿ ಆಗುತ್ತದೆಂದು ನಿರೀಕ್ಷಿಸಿದ್ದೆ. ಆದರೆ ಇವೊತ್ತಿನ ವರೆಗೂ ಇದು ಅದೇ ನಿರೀಕ್ಷಣೆಯ ಸ್ಥಿತಿಯಲ್ಲಿಯೇ ನಿಂತಿದೆ. ಇದರ ಮೇಲ್ವಿಚಾರಣೆಗಾಗಿ ವಿಶೇಷ ಸಿಬ್ಬಂದಿ ಬೇರೆ ಏರ್ಪಟ್ಟಿದೆ. ಆದರೂ ಸಹ ಈ ಬಗ್ಗೆ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆಯುತ್ತವೆ. ಉದ್ಯಾನ ವನಕ್ಕಾಗಿ ಏರ್ಪಟ್ಟಿರುವ ಪ್ರದೇಶವೆಲ್ಲಾ ಬೀಡು ಪ್ರದೇಶವಾಗಿರುವುದನ್ನು ನೋಡಿದರೆ, ಈ ಸಿಬ್ಬಂದಿಗಾಗಿ ಹಣ ವ್ಯಥಾ ಖರ್ಚಾಗುತ್ತಿದೆ, ಈ ರೀತಿ ಅನ್ಯಾಯವಾದ ಖರ್ಚನ್ನು ತಡೆಗಟ್ಟುವುದಕ್ಕೆ ಮಾರ್ಗವಿಲ್ಲವೇ ಎಂದೆನ್ನಿಸುತ್ತದೆ. ಸರ್ಕಾರದವರು ಈ ಸಣ್ಣ ಪುಟ್ಟ ನಗರಾಭಿವೃದ್ಧಿ ಕಾರ್ಯಗಳಲ್ಲಿಯೂ ಏಕೆ ಈ ರೀತಿ ತಾತ್ಸಾರ ಮನೋಭಾವನೆಯಿಂದ ಕೂಡಿ ಸಾರ್ವಜನಿಕರ ಹಣವು ದುರ್ವಿನಿಯೋಗ ವಾಗಲು ಅವಕಾಶಕೊಟ್ಟಿದ್ದಾರೋ ಅರ್ಥವಾಗುವು ದಿಲ್ಲ. ಯಾವ ಉದ್ದೇಶಕ್ಕಾಗಿ ಸರ್ಕಾರವು ಸಿಬ್ಬಂದಿ ವ್ಯವಸ್ಥೆಮಾಡಿಕೊಂಡಿರುತ್ತಾರೋ ಆ ಸಿಬ್ಬಂದಿಯವ ರಿಂದ ಆಗಬೇಕಾದ ಕೆಲಸವು ತೃಪ್ತಿಕರವಾಗಿ ಆಗಿ, ಅದರಿಂದ ಸಾರ್ವಜನಿಕರಿಗೂ ಅನುಕೂಲ ದೊರೆಯ ಬೇಕು, ಹಾಗಿಲ್ಲದಿದ್ದರೆ ಅಂಥ ಸಿಬ್ಬಂದಿಯಿರುವ ಇಲಾಖೆಯೇ ನಿರರ್ಥಕ. ಸರ್ಕಾರದವರು ಇದನ್ನು ಗಮನಿಸಿ ಇಲ್ಲಿಯ ಉದ್ಯಾನವನಗಳು ಉತ್ತಮ ರೀತಿಯಲ್ಲಿರಲು ತಕ್ಕ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಪಡಿಸುವ ಸಲುವಾಗಿ ಈ ಖೋತಾ ನಿರ್ಣ ಯವನ್ನು ಮಂಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕಾ ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ, ಶ್ರೀ ಟಿ. ಎನ್. ಮೂಡಲಗಿರಿಗೌಡರ ಉದ್ದೇಶದ ಬಗ್ಗೆ ಸರ್ಕಾರಕ್ಕೆ ಯಾವ ರೀತಿಯ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಅವರು ಬಹಳ ಆತುರವನ್ನು ವ್ಯಕ್ತ ಪಡಿಸಿದರು. ಜಾಗ್ರತೆ ಆಗಬೇಕಾದ ಕೆಲಸವಿದು, ಇದನ್ನು ಅತಿ ಶೀಘ್ರವಾಗಿ ಮಾಡಿ ಕೊಡಿ ಎಂಬ ವಾದ ವನ್ನು ಸಭೆಯ ಮುಂದಿಟ್ಟಿರುತ್ತಾರೆ. ತುಮಕೂರಿ ನಲ್ಲಿ ಉದ್ಯಾನವನಗಳನ್ನು ವ್ಯವಸ್ಥಿತ ರೀತಿಯಲ್ಲಿಡಲು ಸರ್ಕಾರಕ್ಕೆ ಇದ್ದ ತೊಡಕು, ಅಲ್ಲಿ ಇದಕ್ಕಾಗಿ ಒದಗಿ ಸಿರುವ ನೀರಿನ ಅಭಾವ, ಇದನ್ನು ಹೋಗಲಾಡಿಸಲು ಒಂದು ನೀರಿನ ಭಾವಿಯನ್ನು ತೋಡಿಸುತ್ತಿದ್ದೇವೆ. ಇದನ್ನು ಬೇಕಾದರೆ ನನ್ನ ಮಿತ್ರರು ಹೋಗಿ ಪರಿಶೀಲಿಸ ಬಹುದು. ನೀರನ್ನು ಎತ್ತುವುದಕ್ಕಾಗಿ ಒಂದು ರಷ್ಯನ್ ವೀಲ್ ತೆಗೆದುಕೊಂಡಿದೆ. ಈ ಬಗ್ಗೆ ಕಾರ್ಯ ಕ್ರಮವು ತ್ವರಿತವಾಗಿ ನಡೆಯಲು ಸಂಬಂಧ ಪಟ್ಟ ಅಧಿಕಾರಿಗಳಿಗೆ ತಿಳಿವಳಿಕೆ ಕೊಡಲಾಗುತ್ತದೆ. ಈ ಭರವಸೆಯ ಮೇಲೆ ಮಾನ್ಯ ಸೂಚಕರು ಈ ಖೋತಾ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವರೆಂದು ನಂಬಿದ್ದೇನೆ.

Sri T. N. MUDALAGIRI GOWDA.—I withdraw the cut motion with the leave of the House.

(*The cut motion was then, by leave, withdrawn.*

Merging the Horticultural Department with the Agricultural Department.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ, ಅನುಸೂಚಿತ—ಜಾತಿಗಳು.).—ಅಧ್ಯಕ್ಷರೇ, ನನ್ನ ಖೋತಾ ಸೂಚನೆ ಈ ರೀತಿ ಇದೆ :

"40 (b) ಬೊಟಾನಿಕಲ್ ಮತ್ತು ಇತರ ಸರ್ಕಾರಿ ಉದ್ಯಾನಗಳು" ಎಂಬ ಬಾಬಿನಲ್ಲಿ ಕೋರಿ

(ಶ್ರೀ ಕೆ. ಪ್ರಭಾಕರ್.)

ರತಕ್ಕ 9,66,000 ರೂಪಾಯಿಗಳ 'ಡಿಮ್ಯಾಂಡ್' ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಿಮೆಮಾಡಬೇಕು (ಈ ಇಲಾಖೆಯನ್ನು ವ್ಯವಸಾಯದ ಇಲಾಖೆಯೊಡನೆ ಒಟ್ಟುಗೂಡಿಸುವ ವಿಷಯವನ್ನು ಪರಿಶೀಲಿಸುವುದಕ್ಕಾಗಿ)"

ಈ ಕತ್ತರಿ ನಿರ್ಣಯವನ್ನು ಸಭೆಯ ಮುಂದಿಡುತ್ತಾ ಬೊಟಾನಿಕಲ್ ಇಲಾಖೆ ಮತ್ತು ವ್ಯವಸಾಯದ ಇಲಾಖೆ ಇವೆರಡನ್ನು ಒಂದುಗೂಡಿಸುವುದನ್ನು ಒತ್ತಾಯ ಪಡಿಸುವುದೇ ನನ್ನ ಉದ್ದೇಶವೆಂದು ತಿಳಿಸುತ್ತೇನೆ. ಈಗ ನಾವು ಒಂದು ಹೊಸರೂಪದ ಸರ್ಕಾರವನ್ನು ನಡೆಸತಕ್ಕ ವಾತಾವರಣದಲ್ಲಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಮುಂದೆ ಲೆಕ್ಕವಿಲ್ಲದಷ್ಟು ಸಮಸ್ಯೆಗಳು ಉದ್ಭವವಾಗುತ್ತವೆ. ಇದರಿಂದ ನಮ್ಮ ಮನಸ್ಸು ಮೆಚ್ಚುವ ರೀತಿಯಲ್ಲಿ ದೇಶದ ಜನರಿಗೆ ಹೆಚ್ಚಿನ ಸೌಕರ್ಯವಾಗುವ ಹಾಗೆ ಸರ್ಕಾರದ ಮುಖೇನ ದುಡಿಯಬೇಕೆಂಬ ಆಶೆ ಯಾರಿಗೂ ಇಲ್ಲದೆ ಇಲ್ಲ. ಆದರೆ ನಮ್ಮ ಈ ಆಶೆ ಆಕಾಂಕ್ಷೆಗಳಿಗೆ ಧಕ್ಕೆ ತಗಲದೆ ಇರತಕ್ಕ ರೀತಿಯಲ್ಲಿ ಕಾನೂನು ಕಟ್ಟಲೆಗಳಿರಬೇಕೆಂದು ಎಲ್ಲರೂ ಹೇಳತಕ್ಕದ್ದು ವಾಡಿಕೆಯಾಗಿದೆ. ಹೀಗಿರುವಾಗ ಸರ್ಕಾರದ ಇಲಾಖೆಗಳಲ್ಲಿ ಈಗ ಕಂಡುಬರುವ ಎರಡು ಅಂಶಗಳನ್ನು ನಾನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಒಂದು structural organisation, ಇನ್ನೊಂದು functional organisation. ಇದು ಸಹ ಆಯಾ ಸಂದರ್ಭ ಸನ್ನಿವೇಶಗಳಿಗೆ ತಕ್ಕಹಾಗೆ ವ್ಯವಸ್ಥಿತವಾಗಿರುತ್ತದೆ. ಬಹುಶಃ ಈಗ ಸರ್ಕಾರದವರು ಕೈ ಹಾಕುವ ಅನೇಕ ಬಾಬುಗಳಲ್ಲಿ ದುಡ್ಡು ಉಳಿಸುವ ಪ್ರಮೇಯವೇ ಜಾಸ್ತಿಯಾಗಿ ಕಂಡು ಬರುತ್ತಿದೆ. ಈ ವಿಚಾರದಲ್ಲಿ ಯಾವ ಇಲಾಖೆಯ ಅಧಿಕಾರಿಯನ್ನಾದರೂ ಕೇಳಿ, ನೀವು ಕೊಡತಕ್ಕ ದುಡ್ಡು ಯಾವುದಾದರೂ ಬಾಬಿನಲ್ಲಿ ಪೂರ್ಣವಾಗಿ ಖರ್ಚಾಗುತ್ತದೆಯೇ ಎಂದು. ಆಗ ಅವರೇ ತಿಳಿಸುತ್ತಾರೆ. ನಾವು ಈ ವಿಚಾರಗಳಲ್ಲಿ "ಹೆತ್ತವರಿಗೆ ಹೆಗ್ಗಣ ಮುದ್ದು" ಎಂಬ ತತ್ವವನ್ನೇ ಹೆಚ್ಚು ಮಾಡಿಕೊಳ್ಳದೆ, ದೇಶದ ಆಡಳಿದ ನೀತಿಯಲ್ಲಿ in the best interest of the State and in the interest of the people in general, ಈ ಇಲಾಖೆಗಳ ಕೆಲಸಕಾರ್ಯಗಳಲ್ಲಿ ಯಾವುದನ್ನು ಒಟ್ಟುಗೂಡಿಸಲು ಅನುಕೂಲವೆಂಬುದನ್ನು ಅರಿತು ಅದರಂತೆ ವ್ಯವಸ್ಥೆಗೊಳಿಸುವುದು ಒಳ್ಳೆಯದು. ಮದರಾಸಿನಲ್ಲಿ agricultural, horticultural, ಮತ್ತು vaterinary ಈ ಮೂರು ಡಿಪಾರ್ಟ್‌ಮೆಂಟುಗಳೂ ಒಬ್ಬ ಅಧಿಕಾರಿಯ ಆಡಳಿತಕ್ಕೆ ಒಳಪಟ್ಟಿದೆ. ನಾವೂ ಸಹ ಸರ್ವ ಸಮನ್ವಯ ದೃಷ್ಟಿಯಿಂದ ದೇಶದ ಆಡಳಿತ ವ್ಯವಸ್ಥೆಯಲ್ಲಿ ಖರ್ಚು ಕಡಿಮೆಯಾಗಿ ಒಂದು ಬಗೆಯ ಹೊಂದಾಣಿಕೆ ತಲೆ ದೋರುವ ದೃಷ್ಟಿಯಿಂದ ಈ ಅಂಶವನ್ನು ನೋಡುವುದಾದರೆ, ಈ ಇಲಾಖೆಯನ್ನೂ ವ್ಯವಸಾಯದ ಇಲಾಖೆಯೊಡನೆ ಸೇರಿಸಿ ಒಂದೇ ಇಲಾಖೆಯ ಮುಖ್ತೇಸರರ ಮೇಲ್ವಿಚಾರಣೆಗೆ ಒಳಪಡಿಸುವುದು ಸೂಕ್ತವಾದುದು. ಸರ್ಕಾರದವರು ಈ ವಿಚಾರವನ್ನು ಯೋಚನೆಮಾಡಿ re-organisation of the department in such a way as to take the best advantage in the form of service to the people in general—ಈ ರೀತಿ ವ್ಯವಸ್ಥೆಗೊಳಿಸುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು. ಈ horticultural ಮತ್ತು agricultural ಇವೆರಡೂ side by side ಹೋಗುವಹಾಗೆ ತಕ್ಕ ವ್ಯವಸ್ಥೆಮಾಡುವುದು ಅತ್ಯಗತ್ಯ. ಈಗೇನೋ ಹಲವಾರು ವಿಚಾರಗಳಲ್ಲಿ, ಅಷ್ಟೇಕೆ, ನಮ್ಮ ಕಣ್ಣಿಗೆ ಒಬ್ಬರು, ಕಿವಿಗೆ ಒಬ್ಬರು, ಮೂಗಿಗೆ ಒಬ್ಬರು, ತಲೆಗೆ ಒಬ್ಬರು, ಎದೆಗೆ ಒಬ್ಬರು ಮತ್ತು ಕೊನೆಗೆ ಕೂದಲಿಗೆ ಒಬ್ಬರು—ಈ ರೀತಿ ಒಂದೊಂದರಲ್ಲಿಯೂ ನೈಪುಣ್ಯತೆ ಪಡೆದವರು ಬಂದು ಬಿಟ್ಟಿದ್ದಾರೆ! ಈ ತತ್ವವನ್ನೇ ಇಲಾಖೆಗಳನ್ನು ಒಂದುಗೂಡಿಸುವ ವಿಚಾರಕ್ಕೆ ಅನ್ವಯಿಸದೇ, ಅಗ್ರಿಕಲ್ಚರ್, ಹಾರ್ಟಿಕಲ್ಚರ್ ಮತ್ತು ವೆಟರಿನರಿ ಈ ಮೂರು ಇಲಾಖೆಗಳನ್ನೂ ಒಂದುಗೂಡಿಸುವುದು ಇದೇರೀತಿ ಪಬ್ಲಿಕ್‌ಹೆಲ್ತ್ ಮತ್ತು ಮೆಡಿಕಲ್. ಹೀಗೆ ಇನ್ನು ಯಾವ ಯಾವ ಇಲಾಖೆಗಳನ್ನು ಒಟ್ಟುಗೂಡಿಸುವುದರಿಂದ ಹೆಚ್ಚು ಹೊಂದಾಣಿಕೆ, ಕಾರ್ಯದಕ್ಷತೆ, ಮಿತವ್ಯಯ ಕಂಡುಬರಲು ಸಾಧಕವಾಗುತ್ತದೆಯೋ ಅವೆಲ್ಲವನ್ನೂ ಕೇಂದ್ರೀಕರಿಸುವುದು ಒಳ್ಳೆಯದು. ಇದಾಗದಿದ್ದರೆ ಸಂಸ್ಥಾನಾದ್ಯಂತವೂ ಈ ವಿಚಾರದಲ್ಲಿ ಕ್ರಾಂತಿಕಾರಕ ಚಳುವಳಿ ಆಗುವ ಕಾಲವು ಸನ್ನಿಹಿತವಾದೀತೆಂದು ನಾನೊಂದು ಎಚ್ಚರಿಕೆಯ ಮಾತನ್ನಾಡಿದರೆ ಅದೇನೂ ಅತಿಶಯೋಕ್ತಿಯಾಗಲಾರದು. ಈಗ ನಮಗೆ ಹೊಟ್ಟೆಗೆ ಹಿಟ್ಟಿಲ್ಲದೇ ಇರುವಾಗ ಜುಟ್ಟಿಗೇಕೆ ಮಲ್ಲಿಗೆ ಹೂ ! ಈಗಿನ ಕಷ್ಟ ಪರಿಸ್ಥಿತಿಯಲ್ಲಿ ನಾವೆಂದೆಂದಿಗೂ ದುಂದು ವೆಚ್ಚಕ್ಕೆ ಆಸ್ಪದವೇ ಕೊಡಬಾರದು. ಈ ರೀತಿಯಾಗಿ ದೇಶದ ಬಡಜನರ ಬಹುಭಾಗದ ಹಣ ಪಟ್ಟಣದ ಶೃಂಗಾರ ವೈಭವಗಳ ನೆಲೆವೀಡಿಗೆ ಆಶ್ರಯವಾಗಿರುವ ಇಂಥ ಹಲವಾರು ಇಲಾಖೆಗಳ ಉದ್ಧಾರಕ್ಕಾಗಿ ವಿನಿಯೋಗವಾಗುವುದು ಸರ್ವಥಾ ನ್ಯಾಯವಲ್ಲ.

ಮತ್ತು ಹಿಂದೆ ಒಂದುಸಲ ಈ ಇಲಾಖೆಗಳಲ್ಲಿ Consolidated Committee ಎಂಬುದಾಗಿ ಸರ್ಕಾರದವರು ನೇಮಕ ಮಾಡಬೇಕೆಂದು ಇದ್ದರು. ಆಗ ಹರಿಜನೋದ್ಧಾರಕ್ಕಾಗಿ ಎಕ್ಸ್‌ಪರ್ಟ್ ಕಮಿಟಿ ಮಾಡಬೇಡಿ, ಇಲಾಖೆಯವರನ್ನು ಕೇಳಿ ಅವರ ಅಭಿವೃದ್ಧಿ ಯಾವ ರೀತಿ ಆಗಬೇಕೋ ಅದಕ್ಕನುಸಾರವಾಗಿ ಇಲಾಖೆಯನ್ನು ಅನ್ವಯಿಸಿಕೊಳ್ಳಿ ಎಂದು ಹೇಳಿದ್ದೆವು. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಐದಾರು ಗುಂಟೆ ಜಮೀನಿನಲ್ಲಿ ಹೂವು, ಹಣ್ಣು ಬೆಳೆದುಕೊಂಡು ಒಂದು ಸಂಸಾರದವರು ಸುಖವಾಗಿ ಜೀವನ ಮಾಡುತ್ತಾರೆ. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಇರಬೇಕಾದದ್ದು ಬಡವರಿಗೆ, ಬಡವರು ತಮ್ಮ ಜೀವನ ಮಾಡಿಕೊಳ್ಳುವಹಾಗೆ ಅನುಕೂಲ ಮಾಡಿಕೊಟ್ಟು ನಾಲ್ಕಾರು ಗುಂಟೆಗಳಲ್ಲಿ ಹೂವು ಬೆಳೆಯುವಂತೆ ಮಾಡುವಹಾಗೆ ಇಲಾಖೆಯನ್ನು ಮುಂದುವರಿಸಲಿ ಎಂದು ಹೇಳುತ್ತೇನೆ. ಈ ರೀತಿ ಮಾಡುವುದಕ್ಕಾಗಿ ಆ ಇಲಾಖೆಯನ್ನು ಮಾರ್ಪಾಡುಮಾಡಿ ಯೂನಿಫಿಕೇಷನ್ ಮಾಡಲು ಒತ್ತಾಯ ಪಡಿಸುತ್ತೇನೆ. ಒಂದು ವಿಷಯವನ್ನು ಸರ್ಕಾರದವರ ಮುಂದೆ ಇಡಬೇಕೆಂದು ಇದ್ದೇನೆ. ಈ ಒಂದು ಕತ್ತರಿ ನಿರ್ಣಯವನ್ನು ನಾನು ತಂದುದರ ಉದ್ದೇಶ ಇಷ್ಟೇ. ಏನೋ ಪಾಪ, ಮನಸ್ಸಿಗೆ ಬೇಜಾರಾದಾಗ ವನಗಳ ಸುತ್ತಾ ಓಡಾಡಿದರೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಎಂದು ಉದ್ಯಾನವನಗಳಿಗಾಗಿ ದುಡ್ಡು ಖರ್ಚು ಮಾಡುತ್ತಿದ್ದೀರಿ. ಇದು ಒಬ್ಬ ಬಡವ ಬಿಳಿ ಆನೆ ಕಟ್ಟಿಹಾಕಿದಹಾಗೆ ಆಗಿದೆ ಎಂಬುದನ್ನು ಅರಿತು, ಇದರ ಪ್ರಯೋಜನ ಹೊಂದಬೇಕೆಂದಿದ್ದರೆ ಇಂಟೆನ್ಸೀವ್ ಆಗಿ ಮಾಡಿ ಒಂದು ಗುರಿಯನ್ನು ಮುಟ್ಟಬೇಕು. ಇದನ್ನು ಕಾರ್ಪೊರೇಷನ್ ಮೇಲೆ ಹೊರಿಸಬೇಕು. ಹಳ್ಳಿಗಳ ಕಡೆಯಂತೂ ಇದನ್ನು ಬೇಡ ಅನ್ನುವವರು ಯಾರೂ ಇಲ್ಲ, ರೂರಲ್ ಸ್ಕೀಂ ಎಂದು ಯಾವುದು ಇರುತ್ತದೆಯೋ ಅದರಲ್ಲಿ ಆ ಇಲಾಖೆ ಹಳ್ಳಿಗಳ

ಕಡೆ ಯಾವ ರೀತಿ ಅನ್ವಯಿಸಬೇಕು ಎಂಬುದನ್ನು ಸ್ಕ್ರೂಟಿನಿ ಮಾಡಿಸಿ. ಈ ರೀತಿ ಯೂನಿಫಿಕೇಷನ್ ಮಾಡಲು ಪ್ರಯತ್ನ ಮಾಡಿಸಬೇಕು. ಹಾಗೆ ಮಾಡಿ ಇದರ ಪ್ರೊಗ್ರೆಸ್ ಏನು, ಹೇಗೆ, ಎಂಬುದನ್ನು ತಿಳಿದುಕೊಂಡು ಮುಂದುವರಿಯಬೇಕು. ಲ್ಯಾಂಡ್ ಕಲ್ಟಿವೇಟ್ ಮಾಡಬೇಕು ಎಂದು ಹೇಳುತ್ತೀರಿ. ಸಾಯಿಲ್ ಸರ್ವೆ ಮತ್ತು ಲ್ಯಾಂಡ್ ರೀಕ್ಲಾಸಿಫಿಕೇಷನ್ ಮಾಡಲು ಸಂಸ್ಥಾನದಲ್ಲಿ ಪ್ರಯತ್ನಪಟ್ಟಿಲ್ಲ ಎಂದು ಹೇಳಬೇಕಾಗಿದೆ. ಈಗೇನೋ ಖೋತಾ ನಿರ್ಣಯ ಬಂದಿದೆ, ಸಮರ್ಪಕವಾದ ರೀತಿಯಲ್ಲಿ ಮಾಡುತ್ತೇವೆ ಎಂದು ತಾವು Ceremonial way ನಲ್ಲಿ ಹೇಳಬಹುದು. ಅಷ್ಟಕ್ಕೇ ನಾವು ಬಿಟ್ಟುಕೊಡುವುದಿಲ್ಲ. ಆದ್ದರಿಂದ ದಯವಿಟ್ಟು ಇದನ್ನು ತಾವು ಮಾಡಿಸುತ್ತೀರಿ ಎಂದು ನಂಬಿಕೆ ಇದ್ದರೂ ಕೂಡ—ಇದನ್ನು ಬಹಳ ಜಾಗ್ರತೆಯಾಗಿ ಮಾಡುವುದಲ್ಲದೆ ಇದನ್ನು 'ಕೈ ಬಿಡಬಾರದ ಸಂಗತಿ' ಎಂಬ ಕಲಂನಲ್ಲಿ ಸೇರಿಸಿ ನಮ್ಮ ಆಶಯವನ್ನು ಈಡೇರಿಸುತ್ತೀರಿ ಮತ್ತು ರೈತರ ಜೀವನೋಪಾಯಕ್ಕೆ ಒಂದು ಹೊಸ ಚೈತನ್ಯವನ್ನುಂಟು ಮಾಡುತ್ತೀರಿ ಎಂದು ನಂಬಿ ಈ ಸಲಹೆಯನ್ನು ಸರ್ಕಾರದವರ ಮುಂದಿಟ್ಟು, ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Cut motion moved :

"That the demand be reduced by Rs. 100".

ಶ್ರೀ ಎಚ್. ಸಿದ್ಧವೀರಪ್ಪ.—ಶ್ರೀ ಪ್ರಭಾಕರ್‌ರವರು ಅವರ ವಾಗ್ಝರಿಯಲ್ಲಿ 'ಸೆರಿಮೋನಿಯಲ್ ವೇ' ನಲ್ಲಿ ಜವಾಬು ಕೊಡುತ್ತೀರಿ ಎಂದರು, ಅದು ಆ ರೀತಿ ಅಲ್ಲ ಎಂದು ಸರ್ಕಾರದ ಪರವಾಗಿ ಹೇಳುತ್ತೇನೆ. ಪ್ರತಿಯೊಂದು ಮಾತನ್ನೂ ತೂಕಮಾಡಿ ಹೇಳುತ್ತೇವೆ. We mean what we say and we say what we mean· Let the Hon'ble Member understand it.

Sri K. PRABHAKAR.—I am very glad.

ಶ್ರೀ ಎಚ್. ಸಿದ್ಧವೀರಪ್ಪ.—ಅದರ ಮೇಲೆ ಅವರು ಇನ್ನೊಂದು ವಿಷಯ ಹೇಳಿದ್ದೇನೆಂದರೆ 'ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೇಕೆ ಮಲ್ಲಿಗೆ ಮೊಗ್ಗು' 'ಬಡವನಿಗೆ ಬಿಳಿ ಆನೆ ಆಗಿದೆ' ಎಂಬುದಾಗಿ ಅನೇಕ ಗಾದೆಗಳನ್ನು ಹೇಳಿದರು. ಹೊಟ್ಟೆ ಮುಖ್ಯ ಎಂಬುದನ್ನು ಒಪ್ಪಿಕೊಳ್ಳಬೇಕು. ಅದು primary consideration. ಆದರೆ ಪ್ರಪಂಚದಲ್ಲಿ ಬರೀ ಹೊಟ್ಟೆಯೇ ಮುಖ್ಯವೇ ಎಂಬುದನ್ನು—ನನ್ನ ಮಾನ್ಯ ಮಿತ್ರರು ಬಹಳ ಬುದ್ಧಿವಂತರು—ಅವರೇ ಸ್ವತಃ ಯೋಚಿಸಿ ಪಾರಮಾರ್ಥಿಕ ದೃಷ್ಟಿಯಿಂದ ನೋಡಬೇಕಾಗಿದೆ. ಒಂದು ವಿಷಯ ಹೇಳುತ್ತೇನೆ. ಹೊಟ್ಟೆಯೇ ಮುಖ್ಯ ಅಂದರೂ ಅವರಂತೆಯೇ ನಾನೂ ಒಂದು ಗಾದೆ ಹೇಳಬೇಕಾಗುತ್ತದೆ. ಈಗ ಒಂದು ನಾಯಿ ಇದೆ, ಅದು ಏನೂ ಮಾಡುವುದಿಲ್ಲ. ಆದರೂ ದೇವರು ಅದಕ್ಕೆ ಹೊಟ್ಟೆಗೆ ಹಿಟ್ಟು ಕೊಡುತ್ತಾನೆ. ಬೆಕ್ಕೂ ಸಹ ಅದೇ ರೀತಿ. ಯಾರೂ ಅದಕ್ಕೆ ಹಾಲು ಕೊಡುವುದಿಲ್ಲ. ತಾನೇ ಹೋಗಿ ಹೊಂಚು ಹಾಕಿ ಹಾಲು ಕುಡಿದು ಬಿಡುತ್ತದೆ' ಆದ್ದರಿಂದ ಪ್ರಪಂಚದಲ್ಲಿ ಹೊಟ್ಟೆ ಮುಖ್ಯ ಅಂದರೂ ಹೊಟ್ಟೆಯೊಂದರಿಂದಲೇ ಪ್ರಪಂಚ ಅಲ್ಲ ಎಂಬುದನ್ನು ಸಹ ಮರೆಯಬಾರದು. ಮಾನ್ಯ ಸ್ನೇಹಿತರು ಇದನ್ನು ಹೇಳಬೇಕಾದರೆ, ಎಕಾನಮಿ ದೃಷ್ಟಿಯಿಂದ ಹೇಳಿದರು ಎಂದು ಭಾವಿಸುತ್ತೇನೆ. ಒಂದು ಮಾತ್ರ ಹೇಳುತ್ತೇನೆ. ನಮ್ಮ ಈ ಡಿಪಾರ್ಟ್‌ಮೆಂಟು ಎಷ್ಟುಮಟ್ಟಿಗೆ ಮುಂದುವರಿದಿದೆ ಎಂಬುದು highly technical subject, ಒಂದು ಪ್ರಗತಿದಾಯಕ ದೃಷ್ಟಿಯಿಂದ ಇದನ್ನು ನೋಡಬೇಕು. ಜರ್ಮನೀ ದೇಶದಲ್ಲಿ ಇದಕ್ಕೆ ಒಂದು ಯೂನಿವರ್ಸಿಟಿಯನ್ನೇ ಪ್ರಾರಂಭಮಾಡಿದ್ದಾರೆ. ಹಾರ್ಟಿಕಲ್ಚರಿಗೆ ಒಂದು ಸ್ಪೆಷಲ್ ಯೂನಿವರ್ಸಿಟಿಯಿದೆ. ಹೀಗಿರುವಾಗ ಈ ಹಾರ್ಟಿಕಲ್ಚರಿನ ವಿಷಯದಲ್ಲಿ ನಮ್ಮವರು ಇವೊತ್ತಿನ ದಿವಸ ಕಣ್ಣು ಬಿಡುತ್ತಿದ್ದಾರೆ; ಅದರ ಪ್ರಯೋಜನವೇನು ಎಂಬುದರ ಕಡೆಗೆ ಮನಸ್ಸುಹೋಗಿದೆ. ಇಂಥ ಸಂದರ್ಭದಲ್ಲಿ ಇದು ಬೇಡ ಎಂದು ಹೇಳುವುದು ಅಷ್ಟೇನೂ ಬುದ್ಧಿವಂತಿಕೆಯ ವಾದವಲ್ಲ. ಮಾನ್ಯ ಸ್ನೇಹಿತರು ಗ್ರಾಮಾಂತರಗಳ ದೃಷ್ಟಿಯನ್ನಿಟ್ಟು ವಾದ ಮಾಡಿದರು. ಅದೇ ಗ್ರಾಮಾಂತರ ದೃಷ್ಟಿಯಿಂದ ಹೇಳಬೇಕಾದರೆ, ಈ ಇಲಾಖೆಯ ಸೇವೆ ಈಗ ತಾನೆ ಗ್ರಾಮಾಂತರಗಳ ಕಡೆಗೆ ಹೋಗಿರುವುದರಿಂದ ಇದನ್ನು ಸುಲಭವಾಗಿ ತೆಗೆಯುವುದಕ್ಕೆ ಆಗುವುದಿಲ್ಲ. ಅದೂ ಅಲ್ಲದೆ ಈಗಿನ ದೃಷ್ಟಿಯಿಂದ ಇದು ಒಂದು ಸ್ಪೆಷಲ್ ಡಿಪಾರ್ಟ್‌ಮೆಂಟ್ ಆಗಿ ಕೆಲಸ ಮಾಡುತ್ತಿದೆ. ಅಲ್ಲಲ್ಲಿ ದುಬಾರಿ ಖರ್ಚಾಗಿದ್ದರೆ ಅದನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನಮಾಡೋಣ. ಅಷ್ಟೇ ಅಲ್ಲ, ಈಗತಾನೆ ಶ್ರೀಮಾನ್ ಮೂಡಲಗಿರಿಗೌಡರು, ಮಾದಯ್ಯನವರು ಮತ್ತು ಇತರ ಸ್ನೇಹಿತರು ಹೇಳಿದಹಾಗೆ, ಈ ಇಲಾಖೆಯನ್ನು ಇನ್ನೂ ವಿಶಾಲ ಗೊಳಿಸಬೇಕಾಗಿರುವ ಕಾಲ ಈಗ ಇರುವುದರಿಂದ, ಮಾನ್ಯ ಸ್ನೇಹಿತರು ಹೇಳಿದ ಹೆಚ್ಚು ದುಡ್ಡು ಖರ್ಚಾಗುತ್ತಿದೆ ಅನ್ನುವ ವಿಷಯದಲ್ಲಿ, ಎಲ್ಲೆಲ್ಲಿ ಕಡಮೆ ಮಾಡಲಿಕ್ಕೆ ಸಾಧ್ಯ ಎಂಬುದನ್ನು ವಿಚಾರಮಾಡಿ ನೋಡುತ್ತೇನೆ. ಇಷ್ಟು ಭರವಸೆಕೊಟ್ಟ ಮೇಲೆ ನನ್ನ ಮಾನ್ಯ ಸ್ನೇಹಿತರು ಉದಾರ ಮನಸ್ಸು ಮಾಡಿ, ಈ ಖೋತಾ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಸಚಿವರ ಭರವಸೆಯ ಮೇಲೆ ಈ ಖೋತಾ ನಿರ್ಣಯವನ್ನು ವಾಪಸು ಪಡೆಯಲಿಕ್ಕೆ ಸಭೆಯ ಅನುಮತಿಯನ್ನು ಬೇಡುತ್ತೇನೆ.

The cut motion was, by leave, withdrawn.

Mr. SPEAKER.—There are three minutes more. If there is anybody desiring to speak on the main demand, he may do so.

ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಸರ್ಕಾರದ ಖರ್ಚನ್ನು ಕಡಿಮೆ ಮಾಡಬೇಕು ಎಂಬ ತತ್ವವನ್ನು ಅನುಸರಿಸಿ, ಈ ಬೊಟಾನಿಕಲ್ ಗಾರ್ಡನ್ಸ್ ವಿಷಯದಲ್ಲಿ ಹೆಚ್ಚು ಖರ್ಚಾಗುತ್ತದೆ ಎಂದು ಮಾನ್ಯ ಸದಸ್ಯರಾದ ಶ್ರೀ ಮೂಡಲಗಿರಿ ಗೌಡರು ಮತ್ತು ಪ್ರಭಾಕರ್‌ರವರು ಮತ್ತು ಇನ್ನು ಇತರ ಮಾನ್ಯ ಸದಸ್ಯರು ಈಗತಾನೆ ಇದನ್ನು ಖೋತಾ ಮಾಡಬೇಕು ಎಂಬ ಉದ್ದೇಶದಿಂದ Veterinary, Agriculture and Botanical ಇಲಾಖೆಗಳನ್ನು ಒಂದುಗೂಡಿಸಬೇಕು ಎಂದು ಹೇಳಿದ್ದಾರೆ. ಅದಕ್ಕೆ ತಕ್ಕ ಸಲಹೆ ನೀಡಿದ್ದಾರೆ. ಆದಾಗ್ಯೂ ಕೂಡ, ಬರೀ ಹೊಟ್ಟೆ ಒಂದೇ ಪ್ರಾಮುಖ್ಯವಲ್ಲ,

(ಶ್ರೀ ಬಿ. ರಾಚಯ್ಯ.)

ಸ್ವಲ್ಪ ಇದನ್ನು ಪಾರಮಾರ್ಥಿಕ ದೃಷ್ಟಿಯಿಂದಲೂ ನೋಡಬೇಕು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಹೊಟ್ಟೆಯೇ ಮುಖ್ಯ ಎಂದು ನಾನು ಹೇಳಬೇಕಾಗಿದೆ.

Mr. SPEAKER.—You have only two minutes.

ಶ್ರೀ ಬಿ. ರಾಚಯ್ಯ.—ಪ್ರಪಂಚದಲ್ಲಿ ಮನುಷ್ಯರಾದವರಿಗೆ ಹೊಟ್ಟೆಗಿಲ್ಲದಿದ್ದರೆ ಹೇಗೆ? ನಾಯಿಗಳ ಹಾಗೆ ಬೀದಿ ಬೀದಿ ಅಲೆಯಬೇಕು; ಬೆಕ್ಕುಗಳ ಹಾಗೆ ಮನೆ ಮನೆಯಲ್ಲಿರತಕ್ಕ ಹಾಲು, ಬೆಣ್ಣೆ, ಮೊಸರು ಕದಿಯಬೇಕು ಎಂಬ ವಾದವನ್ನು ನಾನು ಒಪ್ಪುವುದಿಲ್ಲ. ಸರ್ಕಾರದವರ ಕರ್ತವ್ಯ ಆದಷ್ಟು ಇಂಥಾ ಇಲಾಖೆಗಳಲ್ಲಿ ಖರ್ಚು ಕಡಿಮೆ ಮಾಡಿ ಸಾರ್ವಜನಿಕರಿಗೆ ಸಾಕಾದಷ್ಟು ಆಹಾರ ಪದಾರ್ಥಗಳು ಸಿಕ್ಕುವ ರೀತಿಯಲ್ಲಿ ಒದಗಿಸಿ ಕೊಡುವುದು ಅವರ ಕರ್ತವ್ಯ. ಈ ಖರ್ಚನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ, ಕಡಮೆ ಮಾಡಬೇಕೆಂಬ ವಿಷಯವನ್ನು ಒತ್ತಿಹೇಳಿ, ಈ ಡಿಮ್ಯಾಂಡನ್ನು ವಿರೋಧಿಸುತ್ತೇನೆ.

Mr. SPEAKER.—The Hon'ble Minister has already made a statement when the demand was moved. So there is no necessity for him to speak again.

The question is :

"That a sum not exceeding Rs. 9,66,000 be granted to the Government to defray the charges which will come in course of payment during the year ending 31st day of March 1954, in respect of 'Botanical and other Public Gardens'."

The motion was adopted.

Mr. SPEAKER.—The House will now rise for the day and meet tomorrow at 12.

(*The House adjourned at One Minute past Five of the Clock to meet again at Twelve of the Clock on Wednesday, 25th March* 1953.)

WD 4516—GPB—500—28-12-53